ನಮ್ಮ ಮೈಸೂರಿನ ಪತ್ರಿಕಾ ಕಾನೂನು ಅತಿ ಉಗ್ರವಾದುದು. ಈತೀಯುದ ಕಾನೂನು, ಇತರ ಯಾವ ನಾಗರಿಕ ದೇಶದಲ್ಲಿಯೂ ಇರುವದಿಲ್ಲ. ಪೂರ್ವಕಾಲದಲ್ಲಿ ಕೇವಲ ಸಣ್ಣ ಸಣ್ಣ ತಪ್ಪುಗೋಸ್ಕರವಾಗಿಯೇ ಮನುಷ್ಯನ ಪ್ರಾಣಕ್ಕೇ ಅಪಾಯವನ್ನು ಮಾಡುತ್ತಿದ್ದರಂತೆ. ಕೆಲವು ತಪ್ಪುಗಳಿಗಾಗಿ ಕೆಲವು ಅಂಗಗಳನ್ನು ಕೊಯ್ಯುತ್ತಿದ್ದರಂತೆ ಅದೆಲ್ಲಾ ಅನಾಗರಿಕ ಸಿದ್ಧತಿ ಎಂದು ನಾವು ಈಗ ಹೇಳುತ್ತೇವೆ ಮೈಸೂರಿನ ವೃತ್ತಪತ್ರಿಕಾ ಕಾನೂನು ಸೇಲ ಹೇಳದವುಗಳಿಗಿಂತ ಅನಾಗರಿಕವಾದುದು. ಸಂಪಾದಕರ ತಪ್ಪಿಗೋಸ್ಕರವಾಗಿ ಪತ್ರಿಕೆಯನ್ನೇ ನಿಷ್ಠಿಸುವದು ಬಹಳ ಅನ್ಯಾಯ. ಉದಾಹರಣೆಗಾಗಿ ಸ್ಟೇಟ್ಸ್‌ಮನ್ ಅಂತಹ ಜಾಯಿಂಟ್ ಸ್ಟಾಕ್ ಕಂಪನಿಯ ಮುಂತೇರಿ ನಡೆಸುತ್ತಿರುವ ಪತ್ರಿಕೆಯು ಮೈಸೂರಿನಲ್ಲಿರುವುದಾದು ಊಹಿಸೋಣ. ಆ ಪತ್ರಿಕೆಯ ಸಂಪಾದಕರು ಸ್ವತಃಬರೆದ ಕೆಲವು ಲೇಖನಗಳು ಸರಕಾರಕ್ಕೆ ಸಂತೋಷವಿಲ್ಲದೆ ದುಃಖೋಣ. ಇದಕ್ಕಾಗಿ ಸರಕಾರದವರು ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯನ್ನೇ ನಿಲ್ಲಿಸಿದರೆ ಎಷ್ಟು ಅನರ್ಥ? ಬ್ರಿಟಿಷ್ ಇಂಡಿಯಾದಲ್ಲಿ ಕೂಡ ಇಷ್ಟು ಕಠೋರವಾದ ಶಿಕ್ಷೆಯಿಲ್ಲ. ಮೈಸೂರು ಪೇಟ್ರಿಯೆಟ್, ನಾಳ್ಪಡಿ, ಸಂಪದಭ್ಯುದಯ, ಪತ್ರಿಕೆಗಳು ಇಪತ್ತಿನದಲ್ಲಾ ನೆನ್ನೆಯವಲ್ಲ. ತಾತ್ಕೈಯನವರು 50-60 ವರ್ಷಗಳಿಂದಲೂ ಬೇರೆಬೇರೆ ಎಸರಿನಿಂದ ಪತ್ರಿಕೆಗಳನ್ನು ನಡೆಯಿಸುತ್ತಾ ಬಂದಿರುವರು. ಮೈಸೂರು ಪೇಟ್ರಿಯೆಟ್ ಮೊದಲಾದ ಪತ್ರಿಕೆಗಳು 20-25 ವರ್ಷಗಳಿಂದ ನಡೆದು ಕೊಂಡು ಬಂದಿರುವುವು. ಆ ಪತ್ರಿಕೆಗಳು ಮುಖಾಂತರವಾಗಿ ತಿಂಗಳು 1 ಕ್ಕೆ 3,000—4000 ರೂಪಾಯಿ ಲೇವಾದೇವಿಯು ನಡೆಯುತ್ತಿರುವುದು. ಸರಕಾರಕ್ಕೆ ಕೋಪ ಬಂದಿತೆಂದು ಇನ್ನು ದೊಡ್ಡ ಕೆಲಸದ ಕಾರ್ಖಾನೆಯನ್ನೇ ನಿಲ್ಲಿಸಿಬಿಡುವದು ಶುದ್ಧ ಅನ್ಯಾಯ. ಇದೊಂದು ರೀತಿಯಾದ ಘಾತುಕಕೃತ್ಯ. ಬೇಕಾದರೆ ಆ ಪತ್ರಿಕೆಗಳ ಈಗಿನ ಸಂಪಾದಕರನ್ನು ಶಿಕ್ಷಿಸಲಿ. ಬೇರೆ ಸಂಪಾದಕರನ್ನಿಟ್ಟುಕೊಂಡು ಪತ್ರಿಕೆಯನ್ನ ನಡಸಿಸುವದಕ್ಕೆ ಅವಕಾಶವನ್ನು ಕೊಡಲಿ. ಬ್ರಿಟಿಷ್ ಇಂಡಿಯಾದಲ್ಲಿ ಹಿಂದೂ, ಬಾಂಬೆ ಕ್ರಾನಿಕಲ್, ಅಮೃತ ಬಜಾರ್ ಪತ್ರಿಕಾ, ಟ್ರಿಬ್ಯೂನ್, ಮೊದಲಾದ ಪತ್ರಿಕೆಗಳು ಎಷ್ಟೋ ಆದರ್ಶ ಸರಕಾರದ ಕೋಪಕ್ಕೆ ಗುರಿಯಾಗಿರುವವು. ಆ ಪತ್ರಿಕೆಗಳ ಅನೇಕ ಸಂಪಾದಕರು ಜೈಲಿಗೆ ಹೋಗಿರುವರು. ಆದರೂ ಪತ್ರಿಕೆಗಳನ್ನು ಮಾತ್ರ ನಿಷ್ಠಿಸಿಲ್ಲ. ಲೋಕಮಾನ್ಯತಿಲಕರು ಕೇಸರಿ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದುದಕ್ಕಾಗಿ ಸಂಪಾದಕತ್ವ ನಾಪಸಿಂದ ಅನೇಕ ಸಲ ವರ್ಷಗಳು ಶಿಕ್ಷೆಯಾದರೂ ಕೇಸರಿ ಪತ್ರಿಕೆಯು ಮಾತ್ರ ಅಖಂಡವಾಗಿ ನಡೆದುಕೊಂಡು ಬಂತು. ಅದೇಪ್ರಕಾರವಾಗಿ ಅಮೃತ ಬಜಾರ್ ಪತ್ರಿಕೆಯ ಎಡಿಟರುಗಳು ಒಬ್ಬರು ತಪ್ಪ ಒಬ್ಬರು ಜೈಲಿಗೆ ಹೋದರೂ ಪತ್ರಿಕೆಯು ಮಾತ್ರ ನಿಲ್ಲಲಿಲ್ಲ.

ಅನಾಗರಿಕ ಗದಾಪ್ರಹಾರ!

(ಶ್ರೀ॥ ಎಚ್. ಎಸ್. ರಾಜಗೋಪಾಲ್ ರವರಿಂದ)

ನ್ಯಾಯವಿಧಾಯಕ ಸಭೆಯ ರಂಗಸ್ಥಳದಲ್ಲಿ ನಿಂತು ಪ್ರೆಸ್ ಕಾನೂನನ್ನು ರದ್ದುಪಡಿಸುತ್ತೇವೆಂದು ಪೋಕರ ಸ್ವೀಕಾರವು ತನ್ನ ಮಾತಿಗೆ ತಾನೇ ಪುರಸ್ಕಾರ ಕೊಡದಿದ್ದಮೇಲೆ ಇತರರಿಂದ ತಿರಸ್ಕಾರವನ್ನಲ್ಲದೆ ಬೇರೆ ಏನನ್ನೂ ನಿರೀಕ್ಷಿಸಲು ಅಧಿಕಾರವೇ ಇಲ್ಲ. ಈಗಿರುವ ಪ್ರೆಸ್ ಕಾನೂನು ಉಲ್ಲಂಘನೆಗೆ ಮಾತ್ರ ಯೋಗ್ಯವೇ ವಿನಾ ಮತ್ತಾವುದಕ್ಕೂ ಯೋಗ್ಯವಲ್ಲ. ಇದನ್ನು ಎಷ್ಟು ಹೇಳಿದರೂ ಕೊಂಚವೇ.

ಹೆಚ್ಚುಕಡಿಮೆ ಅರ್ಧಶತಮಾನದಿಂದಲೂ ಬೇರೆಬೇರೆ ಹೆಸರುಗಳಿಂದ ಹೊರಬೀಳುತ್ತಿದ್ದ ಶ್ರೀಮಾನ್ ವೆಂಕಟಕೃಷ್ಣಯ್ಯನವರ ಪ್ರಚಾರವೇವೆಯ ಅತ್ಯಶಕ್ತಿಸ್ವರೂಪವಾದ ಪತ್ರಿಕೆಗಳನ್ನು ಈಗಿನ ಸರ್ಕಾರದವರು ನಿಲ್ಲಿಸಿರುವರು ಹೆಜ್ಜೆಹೆಜ್ಜೆಗೂ ತಪ್ಪುಗಳನ್ನು ಮಾಡುತ್ತಿರುವ, ಶುದ್ಧ ಸುಳ್ಳನ್ನೇ ಪ್ರಸಿದ್ಧಪಡಿಸಲು ಇಂಗ್ಲೆಂಡಿನ ಪತ್ರಿಕೆಗಳ ವರೆಗೂ ಓಡಿಹೋದ ನಮ್ಮ ಸರಕಾರಕ್ಕೆ ತಾತಯ್ಯನವರಲ್ಲಿ ತಪ್ಪುಗಳು ಕಂಡುಬಂದಿದ್ದರೆ ಇದುವರೆಗೆ ನಮ್ಮನೆ ಮೌನದಿಂದ ಕುಳಿತಿರುತ್ತಿರಲಿಲ್ಲ. ಸಕಾರಣಗಳಿಂದ ಕೆಲಸಮಾಡುವ ಯಾವ ಸಂಸ್ಥಾನವೂ ಈ ವಿಧವಾದ ಕುಮಾರ್ಗಕ್ಕೆ ಜೀಳುವುದಿಲ್ಲ. ಕಾರಣಗಳನ್ನು ಸ್ಪಷ್ಟಪಡಿಸದೆ ನ್ಯಾಯಮಾರ್ಗದಲ್ಲಿ ಸ್ವಯೇಚ್ಛೆಸೆ ಇರುವುದು ಸಾಕಾರದ ದೌರ್ಬಲ್ಯವನ್ನೇ ಪ್ರಕಾಶಪಡಿಸುತ್ತದೆ

ತಳುಕಿನಿಂದ ಮೆಹರ್ಬಾನಿಮಾತ್ರಾ, ಹುಸುಕಿ ಹುಡುಕಿ ಹಳೇಹಳೇಮೆಟ್ಟುಗಳಿಂದಲೇ ತಲೆಯನ್ನು ತಿಬ್ಬುವ ಸರಕೀಯ ಪತ್ರಿಕೆಗಳ ರುಚಿಯನ್ನೇ ಅಪೇಕ್ಷಿಸುವ ವೇಳೆಯ ಸಂಸ್ಥಾನದ ಸರ್ಕಾರಗಳ ಕೊಟ್ಟೆಗೆ ರೇಶಾಭಿಮಾನದಿಂದ ಹೇಳುವ ಮೃದುಮಧುರ ಮುದುಕ ಹಿತಚಿಂತಕನೆ ಯೇಗೆ ಹೊಕ್ಕೀರು? ನಮ್ಮ ಸರಕಾರಕ್ಕೆ ಹಿತಚಿಂತಕನೆಯೆಂದರೆ ಇನ್ನು ತಾತಯ್ಯನವರಿಗಿಂತ ಹೆಚ್ಚಾಗಿ ನಾ ಡಬಲ್ಲವರಾರು? ಗಿಣಿಗೆ ಹೇಳಿದಂತೆ ಪೋಲೆ ಹೇಳಿ ಮುದುಕರಾಗಿರುವರು! ಈಚೀಚಿಗಂತೂ ಕುಂಬಾ ಹುಣ್ಣಾಗಿ ಬಿಟ್ಟರು. ಎಷ್ಟೂಂತ ಹೇಳಾರು?

ಪತ್ರಿಕಾಚಾಲಕರಲ್ಲಿ ಶ್ರೀ ವೆಂಕಟಕೃಷ್ಣಯ್ಯನವರನ್ನು ಸಂಸ್ಥಾನದವರೆಲ್ಲರೂ ಸಿತಾಮಹರೆಂದೇ ಭಾವಿಸುತ್ತಾರೆ. ಈ ಮಾತನ್ನು ಒಪ್ಪದ ವಂಶಘಾತಕರಾರೂ ನಮ್ಮ ಪತ್ರಿಕಾಚಾಲಕರಲ್ಲಿರುವರೆಂದು ನಾನು ನಂಬುವುದಿಲ್ಲ. ಇಂದು ನಮ್ಮ ಸಂಸ್ಥಾನದಲ್ಲಿರುವ ಪ್ರತಿಯೊಂದು ಪತ್ರಿಕೆಯೂ ತಾತಯ್ಯನವರ ವಂಶದ್ದೇ. ಆ ವೇರಿನಿಂದ ಬೆಳೆದಿರುವುದೇ. ಅವರ ಋದರದಿಂದ ಉದ್ಭವಿಸಿರುವುದೇ. ಹೀಗಿರುವಲ್ಲಿ ಈವತ್ತು ಆ ವಂಶದ ವೃದ್ಧ ಪಿತಾಮಹರನ್ನೇ ನ್ಯಾಯವ್ಯಭಿಚಾರಿಯೆಂದರೆ, ನಿನ್ನಿಂದೇ ಹುಟ್ಟಾಗಿಯೂ ಆ ವಂಶಕ್ಕೆ ವಂಶವೇ ಹೀನಸುಳಿಯಿಂದ ಬೆಳೆದುದೆಂದಾಗುವುದು. ಅವರು ತಪ್ಪಿತಸ್ಥರಾದರೆ ಎಲ್ಲರೂ ತಪ್ಪಿತಸ್ಥರಲ್ಲವೇ.

ಈರೀತಿಯಾದ ಶುದ್ಧ ಅನಾಗರಿಕಗ ದಾಪ್ರಹಾರನ್ನು ನಾಗರಿಕ ದೇಶಗಳಲ್ಲೆಲ್ಲೂ ಔಷಧಿಗೂ ದೊರೆಯಲಾರದು ಇಂತಹುದಕ್ಕೆ ಮೈಸೂರು ದೇಶವು ಮಾದರಿಯಾಗಿ ಪರಿಣಮಿಸುವುದೆಂದರೆ ದೇವರೇಗತಿ! ಪಾಶ್ಚಾತ್ಯದೇಶಗಳಲ್ಲೇ ನಾವದೂ ಇಂತಹ ಅನ್ಯಾಯವು ನಡೆದಿದ್ದಿರೆ ಮಹಾಜನರು ಅಲ್ಲಿನ ಸರಕಾರಕ್ಕೆ ಸಂಸ್ಕಾರವನ್ನೇ ತಲೆಕೆಳಗು ಮಾಡುತ್ತಿದ್ದರು. ಬ್ರಿಟಿಷ್ ಇಂಡಿಯಾದಲ್ಲೇನಾದರೂ ಇಂತಹ ಅಜ್ಞೆಯು ಕೂಡಲ್ಪಟ್ಟಿದ್ದರೆ ಅದನ್ನು ಆಕ್ಷಣವೇತಿರಸ್ಕಾರದಿಂದಯಾದುಹಾಕಿ ಆಜ್ಞೆಮಾಡಿದರ ಮ್ಮಬಮೇಲೆ ಸಗಣೀಸೀರನ್ನು ಸೆರಿಯುತ್ತಿದ್ದರು. ಆದರೆ, ಈ ಅನ್ಯಾಯವು ನಡೆದಿರುವುದು ಮೈಸೂರು ರಾಜಕೀಯ ರಂಗದಲ್ಲಿ. ವಿಶೇಷ ರಾಜಭಕ್ತಿ ನಿಶ್ಚಾಸಗಳನ್ನಿಟ್ಟುಕೊಂಡು ನ್ಯಾಯದಿಂದ ಸೇವೆ ಮಾಜುತ್ತಿರುವ ಉಭಯಕುಲ (ಸರ್ಕಾರವುತ್ತು ಪ್ರಜೆ) ಪಿತಾಮಹರ ಮೇಲೆ ದೌರ್ಜನ್ಯದಿಂದ ತಂಬಿ ಬಂದಿರುವ ಈ ಆಜ್ಞೆಗೆ ತಾತಯ್ಯನವರು ಕೊಟ್ಟಿರುವ ಮರ್ಯಾದೆಯು, ಆಜ್ಞೆಗೆ ಮೂಲವಾದ ಸರಕಾರಕ್ಕೂ ಅದರ ಅಧಿಕಾರಿಗಳಿಗೂ ಅಲ್ಲ. ಮೈಸೂರು ದೇಶದ ಮೈಸೂರು ರಾಜಮನೆತನದ ಚೂಡಾರಿ ಮನೆಯು ಎಲ್ಲಿ ಸಂಪೂರ್ಣಾಯಾಗಿ ಕೆಟ್ಟು ಹೋಗುವುದೋ ಎಂಬ ಶಂಕೆಯಿಂದ ಇಂತಹ ಉಲ್ಲಂಘನಾತಕರ್ಕಿಕವಾದ ಅನ್ಯಾಯದಾಜ್ಞೆಗೂ ಮರ್ಯಾದೆಯನ್ನು ಕೊಟ್ಟಿರುವ ತಾತಯ್ಯನವರ ಹೃದಯದ ನೈರ್ಮಲ್ಯವನ್ನು ಸರಕಾರದವರು ಇನ್ನೂ ತಿಳಿಯದೆ ಇರುವುದು ಬಹಳ ಶೋಚನೀಯವಾದುದು.

ಮುದುಕರಿಗೇ ತಾಳ್ಮೆ. ಅವರಿಗೆ ತಾಳ್ಮೆ ಹೋಯಿತೆಂದರೆ ವಿಪರೀತಕ್ಕೆ ಹಿಡಿದುಕೊಳ್ಳುವುದು. ಮುದುಕರು ತಾಳ್ಮೆಯನ್ನು ಕಳೆದು ಕೊಳ್ಳದಂತೆ ವರ್ತಿಸುವುದು ಸರಕಾರದ ಮುಖ್ಯ ಕೆಲಸ. ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವನಿರ್ಮಾಣಕರೂ ಮಹಾ ರಾಜನೀತಿಯಜ್ಞರೂ ಆದ ರಂಗಾಚಾರ್ಲುರವರ ಕಾಲದಿಂದಲೂ ಸಂಸ್ಥಾನದ ಸೇವೆಯನ್ನು ಮಾಡಿಮಾಡಿ ಅನುಭವವನ್ನು ಹೊತ್ತಿರುವ ನೀತಿಜ್ಞಾನನಿಧಿಯ ಮುದಿತನದ ಮತಿರ್ತಿಯ ಮೇಲೆ ಇಂದು ಸರ್ಕಾರದ ಹುಡುಗಾಟದ ಕೈ! ಸರಕಾರಕ್ಕಾಗಲೀ ರೀತಿನೀತಿಗಳಿಲ್ಲವೆಂದರೆ ಸಂಸ್ಥಾನದ ಪ್ರಜೆಗಳಿಗೂ

(ಮುಂದಿನ ಪುಟವನ್ನು ನೋಡಿ)

ಸಿಂಧ ದೇಶದ ಹೈದರಾಬಾದಿನಲ್ಲಿ ಹಿಂದೂ ಎಂಬ ಪತ್ರಿಕೆಯ ಸಂಪಾದಕರುಗಳು ಒಬ್ಬರ ತಪ್ಪ ಒಬ್ಬರು ಏಳು ಜನಗಳು ಜೈಲಿಗೆ ಹೋದರು ಆದರೂ ಆ ಪತ್ರಿಕೆಯು ನಡೆದುಕೊಂಡು ಬರುತ್ತಿದೆ ಯಂಗ್ ಇಂಡಿಯಾ ಪತ್ರಿಕೆಯ ಸಂಪಾದಕರಾದ ಮಹಾತ್ಮಾ ಗಾಂಧಿಯವರು ಜೈಲಿಗೆ ಹೋದರೂ ಆ ಪತ್ರಿಕೆಯು ನಡೆದುಕೊಂಡು ಬಂದಿತು. ಸಂಪಾದಕರ ತಪ್ಪಿಗಾಗಿ ಪತ್ರಿಕೆಯನ್ನೇ ನಾಶಮಾಡುವುದು ಶುದ್ಧ ಅನ್ಯಾಯ. ಈ ಘಾತುಕದ ಕಾನೂನು ಮೈಸೂರಿನಲ್ಲಿ ಇರುವುದರಿಂದಲೇ ಹಾಗಾವ ಪತ್ರಿಕೆಗಳೂ ನಮ್ಮ ಮೈಸೂರಿನಲ್ಲಿ ಚೆನ್ನಾಗಿ ಅಭಿವೃದ್ಧಿಗೆ ಬರುತ್ತಿಲ್ಲ. ಈಗಿನ ಕಾನೂನು ವೃತ್ತಪತ್ರಿಕೆಗಳಿಗೆ ಹಾಲಾಹಲದಂತೆ ಪರಿಣಮಿಸಿರುವುದು.

ಈ ವಿಷಜ್ವಾಲೆಯಿಂದ ನಮ್ಮ ಜನಜೀವಸವೆಲ್ಲವೂ ಮೃತಪ್ರಾಯವಾಗಿರುವುದು. ಆದುದರಿಂದ ವಹಾಜನಗಳು ಈ ಕಾನೂನನ್ನು ತೊಡಲು ಕೀಳುವ ಪ್ರಯತ್ನ ಮಾಡಬೇಕು.

Regd No. M 2322 ॥ ವಂದೇ ಮಾತರಂ ॥ ಬಿಡಿಪ್ರತಿ ೩ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಶನಿವಾರ ೧೨ ಜನವರಿ - ೨೯ [ಸಂಚಿಕೆ ೯೩

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುವು

ತಲೆನೋವು | ತೆಮ್ಮು
ವಾತಶೂಲೆ | ನೆಗಡಿ
ಬೆನ್ನುನೋವು | ಸುಟ್ಟಘಾಯ
ಕಟಿಶೂಲೆ | ಹುಣ್ಣುಗಳು
ಪಾರ್ಶ್ವವಾಯು | ಉಳುಕಿದನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ನಮ್ಮಿಂದಲ್ಲಿರಿಸಿಕೊಂಡಿರಿ.
ಹಿಪ್ಪೆ ವೈದ್ಯಸೋಪಾಯವಲ್ಲ ನಮ್ಮನ್ನ ರೋಗಗಳನ್ನೂ ಪರಿಹರಿಸುತ್ತದೆ

ಬಾಲಸಂಜೀವಿನಿ —ಮಕ್ಕಳಿಗೆ ೧೨ ನೇಳು ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ ಅಜೀರ್ಣವಾಯುಗಳ ನ್ನು ನಿವಾರಿಸುತ್ತದೆ. 50 ಮಾತ್ರೆ, 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ:ಕ್ಷೇಪಿಸು ಮಿಶ್ರುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ಕಾಂಬೂಲದೊಳಗೆ ಸೇವಿಸಿದರೆ ಎಲ್ಲಾ ಜ್ವರಗಳಲ್ಲೂ ಎಲ್ಲಾ ರೋಗಗಳಲ್ಲೂ ಶೀಂಡ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮಸ್ತು ದೊಡ್ಡವರ ಮಸ್ತು ನೆಗಡಿ, ಜ್ವರ, ಹಲ್ಲುನೋವು ಶೀತವಾಯು, ಪ್ಲೇಗು ಇನ್ಫ್ಲುಯೆನ್ಜ, ಕಾಲರಾ ಮುಂತಾದವನ್ನು ಖಚಿತ ಗುಣಪಡಿಸುತ್ತದೆ. ಶ್ರೀಮನೆಗಳಲ್ಲೂ ಇರಬೇಕಾದದ್ದು ಆಕ್ಕರೆಕ್ಕಳ ಬೆಲೆ ಸೀಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ಶೀತಲ ಸರಬತ್ತು, ಲೇಹಗಳು ಸಿದ್ಧವಾಗಿವೆ

ಆಯುರ್ವೇದ ವಿದ್ವಾ ಭಿಷಗ್ರತ್ನ ಬಿ ಪಂಡಿತರು,
ಸದ್ವೈದ್ಯಶಾಲಾ ಸಂಸ್ಥಾಪಕರು

TO LET

ಪರೀಕ್ಷಿಸಿನೋಡಿರಿ! ತ್ವರೆ ಮಾಡಿರಿ॥
ಪಂಡಿತ ಮುದ್ಗಲ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ
ಪ್ರಾಣಸಂಜೀವನ ಲೇಹ್ಯ.

ಇದರ ಸೇವನೆಯಿಂದ ಧಾತುಸ್ರಾವ ಅಜೀರ್ಣ, ಸೂತಿಕಾವಾತ, ಮೇಹವಾಯು ಗರ್ಭವಾತ, ನಿದ್ರಾಭಂಗ್ಯ ನರಗಳ ದೌರ್ಬಲ್ಯ, ಮೂತ್ರೋಷ್ಣಾದಿಗಳು ಕ್ಷಯ, ಉಚ್ಚಸ್ತ್ರೀಯರ ರಕ್ತಸ್ರಾವ ಮೊದಲಾದವುಗಳನ್ನು ಜೋಗಗಳಾದಿನೆಪುದರಲ್ಲಿ ಈ ಲೇಹ್ಯವು ಅಸದೃಶವಾದುದು. ಎಂಕಷ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರೆಲ್ಲರು ದೃಢಸಂತಾಸವನ್ನು ಪಡೆದಿರುವರು. ಇದು ವೈದ್ಯಸ್ವಪ್ನವದ ಹೊಗಳಿಕೆಯೆಂದು ಹೇಳದೆ ಕೆಲವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೊಗಳುವಿರಿ.

"ಒಕ್ಕ ಕು ಒಕ್ಕ ಕರೊ" -

ಕ್ರಯ 12 ತೊಲ ಪಬ್ಬಿ 1 ಕ್ಕ ರೂ. ೨—೧—೦
(ಪಸ್ಮೆ ಸಿಂಧೂರಗಳು ಸೇರಿರುವ) ೪—೦—೦

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ ಸನ್ನಿಪಾತಜ್ವರ ಇನ್ಫ್ಲುಯೆಂಜಾ ಸ್ಯಮೋನಿಯಾ ಸಪಸಮಜ್ವರ ಪ್ಲೇಗು ಮೂರರ ಜ್ವರ ಛಳಿಜ್ವರ ಮಕ್ಕಳ ಎಲವು ಶೀತನೆಗಡಿ ತೆಮ್ಮು ಅಜೀರ್ಣ ಪಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣ ವಾದುದು. ಬಹಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ, ಡಿತವಾಗಿಯೂ ಒಹು ಚಾಗ್ರತೆ ಗುಣಪಡಿಸುವುದು.

ಬೆಲೆ 60 ಮಾತ್ರೆಗಳ ಸೀಸೆ 1 ಕ್ಕ ೦—೮—೧
" 40 " " ೦—೪—೦

ವಿ ಪಿ ಥಾರ್ಜು ಪ್ರತ್ಯೇಕ. ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ ಲೇಹ್ಯ ಮಾತ್ರೆ ಚೂರ್ಣ ಭಸ್ಮ ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ

ನಮ್ಮ —ವಿಳಾಸ
ಪಂಡಿತರು ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶಯ,
ಹಳೆ ಅಗ್ರಹಾರ ಮೈಸೂರು

Reserved for

M. S. SIDDAPPA & BROS.

1929 ನೇ ಇಸವಿಯ ಎದ್ದಬ್ಬಾಸ್ ಮೂಡುವ ಪಾಕೆಟ್ ಹೈರಿಗಳು 4 ನಮೂನೆ ತುಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಪೀಟ್ ಕ್ಯಾಲೆಂಡರ್ ವಾಕೆಟ್ ಕ್ಯಾಲೆಂಡರ್ ಮತ್ತು ಶ್ರೀ ವಿಹಾರಿಸ್ವಾಮಿಗಳ ಸುದರ್ಶನ ಪುದಾನ ಮಾಡುವ ಪಂಚೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಸ್ಟೈಲ್ ಪ್ರಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ ಸರಸ್ವತಿದವರು 5 ಆಣೆ ರವಾನಿಸಿದಲ್ಲಿ ಮೊಲ್ಕುಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಖರ್ಚಿನ ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್ ಶಿದ್ದಪ್ಪ ಆಂಡ್ ಬ್ರದರ್ಸ್, ಮೈಸೂರು.

ಎಕ ಗುಪ್ತ ವ್ಯಾಧಿಗಳಿಂದ ನರಳುವಿರಿ?

ತಕ್ಷಣ ಗುಣಪಡಿಸುವ **ಈ ರ್ತ ಮಿಶ್ರಿ ಹಲ್ವಾ** ವನ್ನು ಸೇವಿಸಿ.

ಗುಣ — ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಗೆ ಸ್ವಪ್ನಸ್ಖಲನವಾಗುವಿಕ, ಅತಿ ಸ್ವಾಜ್ಞೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕ ಮೂತ್ರ ದ್ವಾರ ವ್ರಣ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೃಶಕಾಲುನೋವು, ನಿಶಕ್ತಿಯುಂಟಾಗುವಿಕ, ಮೇಹಪರೆ, ಶರೀರವು ಸವಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, ಅಧಿಕ ಧಾತುಪುಷ್ಟಿಯನ್ನುಂಟುಮಾಡಿ ಏಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿ॥ 1 ಕ್ಕೆ 5—0—0. ಅರ್ಧ ಪೌಂಡ್ ಟಿ॥ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರ್ತ ಮಿಶ್ರಿ ಡಿಪೋ, ಚಾಮೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

"ಫಿಷಗೃಹ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದೌಷಧಿಗಳು

ಬಂದ ಒಳಿತ ಪೇಟಾಡುವುದಕ್ಕಿಂತ ರೋಗವ ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ರೋಗಾಮಯಕರ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾರುಣ್ಯವೊದನಾಗಲಿ, ಹಾಗೇ ಆಗಲಿ ರೋಗವನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕಡಿತವನ್ನು ಅಂಟುಗೂಡದೆ ಕಾಪಾಡುತ್ತದೆ.

ಮುಳ್ಳಿ ಎಳತ, ನೆಗಡಿ, ಕೆಮ್ಮುಲು, ಸೀತಜ್ವರ ಪ್ರಾರಂಭ, ಚಳಿಪೀರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ ಪ್ಲೇಗು ಜ್ವರ ಇನ್ಫ್ಲುಯೆಂಜ, ದಿಕ್ತಪಿನಕ ದುರ್ಬಲ ಇವುಗಳನ್ನು, ಪೆಡ್ಡವರ ಪ್ರಾರಂಭ, ಚಳಿಜ್ವರ, ಕೆಮ್ಮಿಲ ಗೊಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಸೀತಜ್ವರಗಳಿಂದ ಸಂದುಗಳು ಹಿಡಿತ ಮಲಬದ್ಧ ಪರಿಹಾರವಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಪ್ರಾಣಾಂತಿಯತಿಗೆ ಕಸ್ತೂರಿಗೆ ಒದುವಾಗಿ ಈ ಮಾತ್ರೆಗಳು ಸಂಜೀವನ ವ್ಯಾಯಾಮವನ್ನು ಮಾಡುವಲ್ಲಿ ಸಂದೇಹವಿಲ್ಲದವರಿಗೂ ಗೋಪಾಸ್ತ್ರೀಯರಿಗೂ ಅರ್ಪಿಸಲ್ಪಡುವುದು.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 0—4—0 ಹೊರ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ ಆಣೆ, 8 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 25 ಕ್ಕೆ 5—3—0.

ಫಿಷಗೃಹ
ಪಾಳ್ಯದ ವೆಂಕಟಾಚಲ ಪಂಡಿತರ
ಶ್ರೀ ಸೀತಾರಾಮಪುರ ವೈದ್ಯಶಾಲಾ
ಹೆಡ್ಡಾಫೀಸು ಮೈಸೂರು

ಬ್ರಾಂಚಾಫೀಸು
ಶ್ರೀ ಸೀತಾರಾಮಪುರ ವೈದ್ಯಶಾಲಾ,
ಚಿಕ್ಕಪೇಟೆ, ಬೆಂಗಳೂರು



ಥಂಗಾರದ ಕೈಬಳೆಗಳೂ, ಜೈಸುಗಳೂ ವಗ್ಗೆರೆ ಆಭರಣಗಳೂ ಜೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮು ಜೂ ರಿ ಇತರ ಕಡೆಗಳಿಗಿಂತ ಸು ಲ ಭ ಕ ಲ ಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ಸಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ನೋಡಿರಿ

ಯಸ್ ನರಸಿಂಹ ಅಯ್ಯರ್ ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ,
ಕೆನರಾಯಣಪ್ಪ ನಗರ್ತಪೇಟೆ, ಬೆಂಗಳೂರು. ಸಿಟಿ

TAI NADU.

Daily Edition.

The Leading Nationalist Daily of Mysore.

Printed and published by P. R. Ramaiya.
at Sri RamaPress, D Subbiah Road Mysore

ತಾ ಯಿ ನಾ ಡು.

11—1—1929

(ಹಿಂದಿನ ಪುಟದಿಂದ ಮುಂದುವರೆದದ್ದು.)

ಮಗುವಲ್ಲ. ಅವರ ಪತ್ರಿಕೆಗಳು ನಿನ್ನೆ ಮೊನ್ನೆ ಹುಟ್ಟಿದ ವುಗಳಲ್ಲ. ವೆಂಕಟಕೃಷ್ಣಯ್ಯನವರು ಮೈಸೂರಿನ ಎಲ್ಲಾ ವಿಧವಾದ ಜಳುವಳಿಗೂ ಜನಕರು ನಮ್ಮಲ್ಲಿ ಅನೇಕರು ಅವರ ಸಮ್ಮುಖದಲ್ಲಿ ರಾಜಕೀಯ ಜ್ಞಾನದ ಪಾಠವನ್ನು ಕಲಿತುಕೊಂಡಿರುತ್ತೇವೆ. ಅವರು ಮಾಡಿರುವ ಮಹಾಜನಸೇವೆಯು ಲೋಕವಿದಿತವಾಗಿದೆ. ಸರ್ಕಾರಕ್ಕೂ ಅನೇಕ ಸಂದರ್ಭಗಳಲ್ಲಿ ಅವರು ಸಹಾಯಪೂರಿತಯನ್ನು ಕೋರಿಸಿರುತ್ತಾರೆ. ಬೆಂಗಳೂರಿನ ಗಲಭೆಗಳು ನಡೆದ ತರುಣದಲ್ಲಿ ಸರ್ಕಾರದವರು ನಾನಾ ವಿಧವಾದ ಸಣ್ಣ ಸಣ್ಣ ಕುಮೂರ್ಗಗಳಿಗೆ ಕೈ ಹಚ್ಚಿರುವರು. ಇದರಿಂದ ಪ್ರಜೆಗಳಿಗೆ ಅವರ ಸದಭಿಪ್ರಾಯದಲ್ಲಿ ಸಂದೇಹ ಉಂಟಾಗಿರುವುದು ಅದರಂತೆಯೇ ಪತ್ರಿಕೆಗಳಲ್ಲಿ ಟೀಕೆ ಟಿಪ್ಪಣಿಗಳು ಬರುತ್ತಿದ್ದುದೂ ಸಹಜವಾಗಿದೆ. ಹೀಗಿರುವಲ್ಲಿ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ಬರೀ ಕೆಟ್ಟ ದೃಷ್ಟಿಯಿಂದಲೇ ನೋಡಕೂಡದು. ವಿಶ್ವೇಶ್ವರಯ್ಯನವರ ಸಮಿತಿಯಮೂ ಪತ್ರಿಕೆಗಳಿಗೆ ಇನ್ನೂ ಎಷ್ಟೋ ಸ್ವಾತಂತ್ರ್ಯವನ್ನು ಕೊಟ್ಟು ತಪ್ಪುಗಳ ಅಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಕೊಡಲು ಒಂದು ಕಮಿಟಿಯನ್ನು ನಿರ್ಮಾಣ ಮಾಡಿಕೊಂಡು ಸೂಚಿಸಿರುತ್ತಾರೆ. ಬಿಡಾರದ ಈ ಪ್ರೆಸ್ ಕಾನೂನನ್ನು ರದ್ದುಮಾಡುವ ಸಲಹೆಯಲ್ಲಿ ಶ್ರೀಮನ್ಮ ಹಾರಾಜರವರ ಸಂಪೂರ್ಣ ಸಮ್ಮತಿಯು ಇರುವದೆಂದು ತಿಳಿಸಿರುತ್ತಾರೆ. ಈ ಕಾನೂನು ಅಕ್ಷರಶಃ ರದ್ದಾಗದಿದ್ದರೂ ಅದರ ಅವಧಿಯು ಪೂರೈಸಿರುತ್ತದೆ. ಆದ್ದರಿಂದ ಸರ್ಕಾರದವರು ತನ್ನ ಸಮಿತಿಯನ್ನು ಪುನರ್ಮಾಪನೆ ಮಾಡಿ ಪುನಃ ತಾತಯ್ಯನವರಿಗೆ ಪತ್ರಿಕೆಯನ್ನು ಹೊರಡಿಸಲು ಅನುಕೂಲವನ್ನು ಕೊಡುತ್ತಾರೆಂದು ನಂಬಿರುತ್ತೇನೆ.

ಒಂಡಿಕೆಯ ವಿರುದ್ಧವಾದುಗಳು.

(1) ಮೈಸೂರು ಪ್ರಜೆಗಳ ಈ ಮಹಾಸಭೆಯು ಮೈಸೂರು ಪೇಟ್ರಿಯೆಟ್ ಮೊದಲಾದ ಪ್ರಜಾಪಕ್ಷಪಾತಿ ಮಹರ ಪ್ರಜಾಸಂಬಂಧವಾದ ಪತ್ರಿಕೆಗಳನ್ನು ನಿಷ್ಕಾರಣವಾಗಿ ಕಾರಾಗೃಹವನ್ನು ತೋರಿಸಿದೆ ವಿಚಾರಣೆಯನ್ನು ನಡೆಸದೆ ಅತ್ಯಂತ ದುಬ್ಬಾಳಿಕೆಯಿಂದ ನಿಲ್ಲಿಸಿದ್ದಕ್ಕೋಸ್ಕರ ವಾಗಿ ಸರ್ಕಾರದವರ ನಡತೆಯನ್ನು ನಿರ್ದಾಕ್ಷಿಣ್ಯವಾಗಿಯೂ ನಿರ್ವಿಶೇಷವಾಗಿಯೂ ಖಂಡಿಸುತ್ತದೆ.

(2) ಸರ್ಕಾರದವರ ಮುಂದಾಲೋಚನೇ ಯಿಲ್ಲದ ಸಹಪತ್ರಿಕೆಯು ಒಸಗಳಲ್ಲಿ ಅಸಮಂಜಸಿಕೆಯನ್ನೂ ವಸ ನಾತ್ಮಪತ್ರವನ್ನೂ ಹೆಚ್ಚಿನುವುದಲ್ಲದೆ ಪ್ರಜೆಗಳಿಗೆ ಚಿನ್ಮೋನ್ಸ್ಯ ತೆಗೆ ಭಂಗವನ್ನು ತರುತ್ತದೆ.

(3) ಸರ್ಕಾರದವರು ತನ್ನ ಹಕ್ಕನ್ನು ವಾಪಸು ತೆಗೆದುಕ್ಕೊಳ್ಳುವಂತೆ ಶ್ರೀಮತ್ ಮಹಾರಾಜರವರ ಅಪ್ಪಣೆ ಮಾಡಬೇಕೆಂಬುವಾಗಿ ಈ ಸಭೆಯು ಅತ್ಯಂತ ವಿನಯಪೂರ್ವಕವಾಗಿ ಮಹಾ ಪ್ರಭುಗಳನ್ನು ಪ್ರಾರ್ಥಿಸುತ್ತದೆ ವಕ್ಷ್ಯ ನಮ್ಮ ಸಂಸ್ಥಾನದಲ್ಲಿ ಈಗ ನೆಲಸಿರುವ ಅಶಾಂತಿಯೂ ಅಸಮಾಧಾನವೂ ಕಡಿಮೆ ಯಾಗಲು ಸಾಧಕವಾದ ನಿರ್ಣಯಗಳನ್ನು ಮಾಡಬೇಕೆಂದು ಅತ್ಯಂತ ನಮ್ರತೆಯಿಂದ ಬಿನ್ನವಿಸುತ್ತದೆ.

೬ ನರಸಿಂಹಯ್ಯನವರು.

ಶ್ರೀಮಾನ್ ವೆಂಕಟಕೃಷ್ಣಯ್ಯನವರು ಪತ್ರಿಕೆಗಳನ್ನು ನಡೆಸದಂತೆ ಕೊಟ್ಟಿರುವ ಹುಕುಮ್ಮು ಕೇವಲ ವಿಷಾದ ಕರವಾಗಿದೆ. ವಿಶ್ವೇಶ್ವರಯ್ಯ ಸಮಿತಿಯ ವಂದಿಯು ಪ್ರಕಟವಾದಮೇಲೆ ಪತ್ರಿಕೆಗಳಿಗೂ ಪತ್ರಿಕಾಕರ್ತರಿಗೂ ಇನ್ನೂ ಹೆಚ್ಚಾದ ಸನ್ಮಾನವು ದೊರೆಯುವುದೆಂದು ನಿರೀಕ್ಷಣೆಯಿತ್ತು. ಶ್ರೀ|| ವೆಂಕಟಕೃಷ್ಣಯ್ಯನವರು ಕಳೆದ 50 ವರ್ಷಗಳಿಂದಲೂ ಪತ್ರಿಕೆಗಳನ್ನು ನಡೆಸುತ್ತಿದ್ದಾರೆ. ಅವರ ಪತ್ರಿಕೆಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಸಂಸ್ಥಾನದವರು ಅವರ ಗಮನಕ್ಕೆ ತಂದಿದ್ದರೆ ಅದಕ್ಕೆ ಅವರು ಸಮಾಧಾನ ಹೇಳುತ್ತಿದ್ದರು ಅವರು ಶ್ರೀಮನ್ ಮಹಾರಾಜರಿಗೆ ಈ ವಿಷಯದಲ್ಲಿ ಅರ್ಜಿ ಹಾಕಿಕೊಂಡಿರುವುದಾಗಿ ಕೇಳುತ್ತೇನೆ. ಖಾನುದರವರು ಯಾವರೀತಿ ಅನುಗ್ರಹಮಾಡುವರೆಂಬುದನ್ನು ಕುತೂಹಲದಿಂದ ನಿರೀಕ್ಷಿಸುತ್ತೇನೆ.

ಅನಂತರ ಸಭಿಕರ ಪರವಾಗಿ ಮ|| ಎ. ಆರ್. ಶ್ರೀಕಂಠ ಶರ್ಮರವರು ಖಂಡನೆಯ ತಂಠಾವನ್ನು ಸೂಚಿಸಿದರು. ಸೂಚಿಸುವಾಗ್ಗೆ ಅವರು ಹೇಳಿದ್ದೇನಂದರೆ ಪತ್ರಿಕೆಗಳಿರುವುದು ಸರ್ಕಾರದವರ ವರ್ತನೆಯನು ಪ್ರಜೆಗಳಿಗೆ ತಿಳಿಸುವುದಕ್ಕೂ ಪ್ರಜೆಗಳ ವರ್ತನೆಯನ್ನು ಸರ್ಕಾರಕ್ಕೆ ತಿಳಿಸುವುದಕ್ಕೂ. ನಾವು ಸರಿಯಾಗಿದ್ದರೆ ಸರ್ಕಾರವು ಜೆನ್ನಾಗಿರುವುದು. ನಾವು ಮೈಮರೆತರೆ ಸರ್ಕಾರವು ಮೈಮರೆಯುವುದು. ಸರ್ಕಾರವನ್ನು ಹಣಿಸಲಿಗೆ ತರುವುದಕ್ಕೆ ಪತ್ರಿಕೆಗಳೇ ವಜ್ರಾಯುಧ. ಸರ್ಕಾರದವರು ಪತ್ರಿಕೆಗಳನ್ನು ನಿಲ್ಲಿಸಿರುವುದು ಪ್ರಜೆಗಳ ಅಭಿಪ್ರಾಯಕ್ಕೆ ವಿಘಾತ. ಆದ್ದರಿಂದ ಸರ್ಕಾರದವರು ತಮ್ಮ ತಪ್ಪನ್ನು ತಿದ್ದಿಕೊಂಡು ಮೈ|| ವೆಂಕಟ ಕೃಷ್ಣಯ್ಯನವರಿಗೆ ಪತ್ರಿಕೆಗಳನ್ನು ಹೊರಡಿಸಿಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು.

ಮ|| ಎ. ಸೀತಾರಾಮಯ್ಯನವರು ಅನುಮೋದಿಸಿದರು. ಪ್ರೆಸ್ ಆಕ್ಟ್ ನಮ್ಮ ಮೈಸೂರಿಗೆ ಅವಶ್ಯಕತೆ ಇರಲಿಲ್ಲ. ಅದರೂ ತಂದರು. ಪ್ರಿವಿಪ್ ರಾಜರ ಸಂರಕ್ಷಣೆಗೆ ಎಂದರು. ನಾವು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ. ಉಪಯೋಗಿಸಿದೂರೆ ಕ್ವಾಸಿಜುಡಿಷಿಯಲ್ ವಿಚಾರಣೆ ಮಾಡಿ ಉಪಯೋಗಿಸುತ್ತೇವೆ ಯೆಂದರು. ಈಗ ಅದೆಲ್ಲಾ ಸರ್ಕಾರಕ್ಕೆ ಮನೆತು ಹೋಗಿದೆ. ಪ್ರೆಸ್ ಆಕ್ಟನ್ನು ಕೆತ್ತು ಹಾಕುತ್ತೇವೆಂದು ಹೇಳಿ ವೆಂಕಟಕೃಷ್ಣಯ್ಯನವರ ಮೇಲೆ ಅದನ್ನು ಛಲಾಯಿಸುವುದೆಂದರೆ ಬಹಳ ಹಾಸ್ಯಾಸ್ಪದ.

ಮ|| ವೈದ್ಯನಾಥಯ್ಯರವರು ಪ್ರೆಸ್ ಆಕ್ಟ್‌ನ್ನು ಕಿತ್ತುಹಾಕುವುದಕ್ಕೆ ಅಸೆಂಬ್ಲಿಗೂ ನ್ಯಾಯ ವಿಧಾಯ ಸಭೆಗೂ ಒಹಿವ್ಯಾರ ಹಾಕಬೇಕೆಂದರು.

ಮ|| ಎಸ್. ಕೃಷ್ಣಸ್ವಾಮಿಐಯಾಂಗಾರರು ತಾತಯ್ಯನವರಿಗೆ ಬಹಳ ಕಷ್ಟ ಒಂದಿದೆ ಅವರನ್ನು ನೋಡಿದರೆ ಬಹಳ ವಸನವಾಗುತ್ತಿದೆ. ಆದರೂ ಅವರ ಮಾತ್ರ ಧೈರ್ಯಗೆಡದೆ ಕೆಲಸಮಾಡುತ್ತಿದ್ದಾರೆ. ಸರ್ಕಾರದವರು ಅಂಧಪತ್ರಮುಖರ ಮೇಲೆ ಕೈ ಎತ್ತಿದ್ದು ಬಹಳ ಅನ್ಯಾಯವೆಂದರು.

ಸಿಂಪಷ್ಟೆಯರು ರಾಮರಾಯರು ಎಲ್ಲರೂ ಸೇರಿ ತಿರುಪತಿ ವೆಂಕಟಾಚಲ ಸ್ವಾಮಿಗೆ ಮೂರು ದಿವಸ ಪ್ರಾರ್ಥನೆ ಮಾಡಿಕೊಳ್ಳಬೇಕೆಂದರು.

ಮ|| ತಗಡೂರು ರಾಮಚಂದ್ರರಾಯರು ಪ್ರೆಸ್ ಆಕ್ಟ್ ಅಧಿಕಾರಿಗಳು ಲಾಲಾ ಲಜಪತರಾಯರ ಪ್ರಾಣವನ್ನು ತೀಗಿಸಿದರು. ಮೈಸೂರು ದೇಶೀಯ ಅಧಿಕಾರಿಗಳು ತಾತಯ್ಯನವರ ಪ್ರಾಣವನ್ನು ತೀಗಿಸುವ ಹಾಗೆ ಕಾಣುತ್ತೆ. ತಾತಯ್ಯನವರಿಗೆ ಈಗ ಮನಸ್ಸಿನಮೇಲೆ ಬಹಳ ಪೆಟ್ಟುಬಿದ್ದಿದೆ. ಆದರಿಂದಲೇ ಅವರು ಕೊರಗಿ ವ್ಯತಪಟ್ಟರೆ ಆ ಕೊಲೆಗೆ ಸರ್ಕಾರದವರೇ ಜವಾಬ್ದಾರರಾಗುವರು ಎಂದರು.

ಇದಾದಮೇಲೆ ಅಧ್ಯಕ್ಷರು ಶ್ರೀಮತ್ ಮಹಾರಾಜರವರಿಗೆ ಜಯವಾಗಲೆಂದು ಹರಸಿ ಉಪಸಂಹಾರ ಭಾಷಣವಾದಿದಮೇಲೆ ಸಭೆಯು ಮುಕ್ತಾಯವಾಯಿತು

ಮ|| ಬಿ. ನಾಗಪ್ಪನವರ ಮೇಲೆ ಮೂಡನಷ್ಟದ ಮೊಖದ್ದಮೆ.

ಅಡ್ವೊಕೇಟ್ ಮ|| ಎಲ್. ಎಸ್. ರಾಜೂರವರು ರಿಟೈರ್ಡ್ ಲೀಗಲ್ ರಿಮೆಂಬ್ರೆನ್ಸರ್ ಮಿ|| ಬಿ. ನಾಗಪ್ಪನವರ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮಾನನಷ್ಟದ ಮೊಖದ್ದಮೆಯು, ಅನೇ ತಾ|| ಮಂಗಳವಾರ ವಿಚಾರಣೆಗೆ ಬಂದಿತು. ಸಂ ವಿಶ್ವೇಶ್ವರಯ್ಯನವರು, ಸಾಕ್ಷಿಯಾಗಿ ಬರುವರೆಂದು ಕೋರ್ಟಿನ ತುಂಬಾ ಪ್ರೇಕ್ಷಕರು ಸೇರಿದ್ದರು. ಕೋರ್ಟಿನ ಹೊರಗೂ ಜನ ಸಂದಣಿಯು ತುಂಬಿತ್ತು. ಆದರೆ ವಿಚಾರಣಾ ಕಮಿಟಿಯ ನೆಕ್ಕೆಟರಿಯವರಾದ ಮಿ|| ಚಾರ್ಲೆಸ್‌ನರೊನ್ಹರ ವಿಚಾರಣೆಯು ನಡೆದನಂತರ, ತಮ್ಮ ವಿಚಾರಣೆಯು ಆಗಲೇಬೇಕೆಂದು ಕೋರ್ಟಿನವರು ಭಾವಿಸುವ ಪಕ್ಷದಲ್ಲಿ, ತಾವು ಕೋರ್ಟಿಗೆ ಸಾಕ್ಷಿಯಾಗಿ ಬರುತ್ತೇವೆಂದೂ ಒಂದು ಕಾಗದವನ್ನು ಬರೆದಿದ್ದರು. ವಿಚಾರಣಾ ಕಮಿಟಿಯು ನೆಕ್ಕೆಟರಿಯವರಾದ ವಿ || ಚಾರ್ಲೆಸ್ ನರೋನ್ಹರು, ಗಲಭೆ ನೇ ನೆಕ್ಷನ್ ಪ್ರಕಾರ ಕ್ಷಾಮರಾದಲ್ಲಿ ನಡೆದ ನಡೆವಳಿಕೆಗಳನ್ನು ಬಹಿರಂಗಪಡಿಸದಂತೆ ಸಂರಕ್ಷಣೆಯನ್ನು ಕೋರಿದರು. ಗಲಭೆಗಳ ವಿಚಾರಣಾ ಕಮಿಟಿಯ ಮುಂದೆ ಮ|| ಎಂ. ಎಸ್. ಲಿಂಗೆಗೌಡರು ಸಾಕ್ಷಿಯನ್ನು ಕೊಟ್ಟಾಗ, ಕಮಿಟಿಯ ಸದಸ್ಯರಲ್ಲಿ ಒಬ್ಬರಾಗಿದ್ದ ಮಿ|| ನಾಗಪ್ಪನವರು ಮಿ|| ಎಲ್. ಎಸ್. ರಾಜೂರವರ ವಿಚಾರಣೆಯಲ್ಲಿ ಅಸಮಾಸಕರವಾದ ಮಾತುಗಳನ್ನು ಆಡಿದರೆಂದೂ ಮತ್ತು ಸಾಕ್ಷಿಗೆ ಅರ್ಧ ಸೊಜಕವಾದ ಪ್ರಶ್ನೆಗಳನ್ನು ಹಾಕಿ, ಫಿರ್ಯಾದಿಯ ವಿಚಾರದಲ್ಲಿ ಅಪಮಾನಕರವಾದ ಉತ್ತರಗಳನ್ನು ಹೊರಡಿಸಿದರೆಂದೂ ಆರೋಪಿಸಿಬ್ಬಟ್ಟಿದೆ.

ಫಿರ್ಯಾದಿಯ ಕಡೆ ಅಡ್ವೊಕೇಟ್ ಮ|| ಡಿ. ಶಾಮರಾಯರೂ ಮತ್ತು ಅಸರಾಧಿಯ ಕಡೆ ವ || ಸಿ. ಶೇಷಾಚಾರ್ಯರನರೂ ವಾದಿಸಿದರು ಮ|| ಬಿ. ನಾಗಪ್ಪನವರೂ ಕೋರ್ಟಿನಲ್ಲಿ ಹಾಜರಾಗಿದ್ದರು ಫಿರ್ಯಾದಿಯ ಕಡೆ ಲಾಯರು ಗುಪ್ತ ಸಾಕ್ಷಿಯ ವಾಂಗ್ಮೂಲವನ್ನು ಕೊಟ್ಟಿಸಲು ತಡೆಸುವುದಕ್ಕೆ ಅಧಿಕಾರವಿಲ್ಲೆಂದು ವಾದಿಸಿದರು. ಅರಾಧಿಗಳ ಕಡೆ ಲಾಯರು ರಾಜಕೀಯ ವಿದ್ಯಮಾನಗಳಿಗೆ ಸಂಬಂಧಪಟ್ಟ ನಡವಳಿಕೆಗಳನ್ನು ಕೋರ್ಟಿಗೆ ತಡೆಸುವುದಕ್ಕೆ ಅಧಿಕಾರವಿಲ್ಲವೆಂದು ವಾದಿಸಿದರು ಈ ಚರ್ಚಾಂತವಾದ ವಿಚಾರದಲ್ಲಿ ಕೋರ್ಟಿನವರು ೯ ನೇ ತಾ|| ಬುಧವಾರ ತೀರ್ಪನ್ನು ಹೇಳುತ್ತೇವೆಂದು ಅಪ್ಪಣೆ ಕೊಟ್ಟರು. ಅಲ್ಲಿಗೆ ಅವತ್ತಿನ ವಿಚಾರಣೆಯು ಪೂರೈಸಿತು. (ಲೋ)

ಮೈಸೂರು ಮಹಾಜನರ ಸಭೆಯಲ್ಲೂ ಲಾಯರುಗಳ ಸಂಘದಲ್ಲೂ ಪತ್ರಿಕೆಗಳನ್ನು ನಿಲ್ಲಿಸಿದ್ದು ಶುದ್ಧ ಅನ್ಯಾಯವೆಂದು ಖಂಡನೆಯಾಯಿತು.

TAI NADU
11—1—1929

ಮೈಸೂರಿನ ಪ್ರಚಂಡ ಸಭೆ.
ನಿರ್ದಾಕ್ಷಿಣ್ಯವಾದ ಖಂಡನೆ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಮೈಸೂರು, 9-1-1929.

ಈ ಸಾಯಂಕಾಲ ಟೌನ್‌ಹಾಲಿನ ನೈರ್ಋತ್ಯದಲ್ಲಿ ಮೈಸೂರು ಮಹಾಜನಗಳ ಪ್ರಚಂಡ ಖಂಡನಾ ಸಭೆಯು ನೆರೆಯಿತು. ಸಭೆಯನ್ನು ಟೌನ್‌ಹಾಲಿನಲ್ಲಿಯೇ ಮಾಡಬೇಕಾಗಿತ್ತು. ಆ ಹಾಲಿನ ಅಧಿಕಾರಿಗಳ ಕೃಪೆಯಿಂದ ಸಭೆಯು ಒಂದೆ ನಡೆಯಲು ಅವಕಾಶವಾಗಲಿಲ್ಲ. ಹೊರಗೂ ಮೈದಾನದಲ್ಲೂ ಗಿಡ, ಸಸಿ, ಬಿತ್ತಿ, ಬೈಗಳನ್ನು ಜನಗಳು ಎಲ್ಲಿ ಜೋಡಿಸಿ ಮಾತುಕತ್ತಿರೆಯೋ ಎಂಬ ಕೆದರಿಕೆಯಿಂದಾಗಿ ಸಭೆಯನ್ನು ಜೇರೆ ಕಡೆ ಮಾಡಬೇಕೆಂದು ಅಧಿಕಾರಿಗಳಿಗೆ ತಿಳುಪಿಸಿದ್ದರು. ಈ ಕಾರಣದಿಂದ 5 ಗಂಟೆಗೆ ಸೇರಬೇಕಾಗಿದ್ದವರಿಂದಲೂ ಜನಗಳೆಲ್ಲರೂ ಮೈದಾನದಲ್ಲಿ ಸೇರಿಬಿಟ್ಟಿದ್ದರಿಂದಲೂ ಸಭೆಯು ಅಲ್ಲಿಯೇ ನಡೆಯಬೇಕಾಯಿತು. ಜನಗಳು ಮಾತ್ರ ಬಹಳ ಎಚ್ಚರಿಕೆಯಿಂದ ಗುರಿಕ ಬಿಲ್ಲಿಗೆ ಕೂಡ ಅವಕಾಶವಿರದಂತೆ ನಡೆದುಕೊಂಡರು. ಆದರೆ ಟೌನ್‌ಹಾಲಿನಲ್ಲಿಯೂ ಮೈದಾನದಲ್ಲಿಯೂ ಸಭೆಯಾಗಲೂಡದೆಂದು ಆತಂಕ ಪಡಿಸಿದ ಮನಸ್ಸಿನ ಧಾರಾಳತೆಯು ಹೊರಬಿತ್ತು. ಈ ವಿಷಯವಾಗಿ ಮುನ್ಸಿಪಲ್ ಕಾರ್ಯಾಲಯದಲ್ಲಿ ಸ್ವಲ್ಪ ಪ್ರತಿಭಟನೆಯೂ ಎದ್ದಿತೆಂದೆ.

ಸಭೆಯಲ್ಲಿ ಸುಮಾರು ೭೦೦೦ ಜನರಿರಬಹುದು. ಎಲ್ಲಾ ಜಾತಿಯವರೂ ಕೋಮಿನವರೂ ಪಂಗಡದವರೂ ಕಸುಬಿನವರೂ ಒಂದಿದ್ದರು. ಅಸಾಯರುಗಳಂತೂ ಹೇರಳವಾಗಿದ್ದರು. ಸಭೆಯಾಗ ಬೇಕಾದ್ದು ಪುಂಜೆಯೇ ಜನಗಳು ಆಸನಸ್ಥಾನವನ್ನು ಹೊರಗೆಮವುತ್ತಿದ್ದರು. ಸೈಮೂರು ಮೆಯ್ಲ್ ಪತ್ರಿಕೆಯು ಪಕ್ಷ ಎಂಬ ಅಕ್ಷರಗಳ ಬಾವುಟವನ್ನು ಬರೆದಿದ್ದ ಬೆಗಳೂರು ಮೈಲ್ಸ್ ಪತ್ರಿಕೆಯ [illegible] ಎರಿ ಬಿಡಿಸಿ ಬಿಡಿಸಿ ಅಸಹ್ಯಪಡಿಸುತ್ತಿದ್ದರು. ಕೆಲವರು ಬೆಂಗಳೂರು ಮೈಲ್ಸ್ ಪತ್ರಿಕೆಯ ಅಂತ್ಯಕ್ರಿಯೆಯನ್ನು ನಡೆಸುವುದೆಂದರೆ ಅದು ಒಂದು ಭಾರಿ ಧರ್ಮದ ಸಾಜಿನೆ. ಒಂದೂ ಉಳ್ಳದವರು ಅಂತ್ಯಕ್ರಿಯೆಯ ಖರ್ಚಿಗೆ ಆಗುವುದಿಲ್ಲ. ಅದುದರಿಂದ ಗತಿಸಿದ ಪತ್ರಿಕೆಯ ಹೆಸ್ರಿಯಬ್ಬಿನ ಹೆಸರನ್ನು ಪೇಳಿಯಾದರೂ ಉಳಿಸಿಕೊಳ್ಳೋಣವೆಂದು ಆಲೋಚಿಸಿದ ಬೆಂಗಳೂರು ಮೈಲ್ಸಿನ ಆಸ್ತಿಯನ್ನು ಕೆಲವರು ಹೀಯಾಳಿಸುತ್ತಿದ್ದರು.

ಶ್ರೀಯುತ ಕೆ. ಯಾಗಿ ಅದ್ಧೆಕ್ಷರಾದ ಪುರುಷೋತ್ತಮಾಚಾರಿಯವರು ಗೊತ್ತವಾಯಿರುವ ದಯ ಮಾಡಿಸಿದ ಮೇಲೆ ಕಾಂಗ್ರೆಸ್ ಕಾರ್ಯದರ್ಶಿಗಳಾದ ಮ|| ಆಗರು ಶಂಕರಪ್ಪನವರ ಸೂಚನೆಯಂತೆ ಅವರಿಗೆ ಅಗ್ರಾಸನವು ಸಮರ್ಪಿಸಲ್ಪಟ್ಟಿತು.

ಶ್ರೀ|| ಗೋವಿಂದಯ್ಯನವರು.

ಇತರೆ ಶಾಮಣ್ಣನವರ ಶಿಷ್ಯ ನಾನೊಬ್ಬ ಅವರ ಪಾಠಶಾಲೆಯಲ್ಲಿ ಹುಟ್ಟಿದವನು. ದುರದೃಷ್ಟದಿಂದ ಅದು ಮೈಸೂರಿನಲ್ಲಿ ಹುಟ್ಟಿದರು. ಬ್ರಿಟಿಷ್ ಇಂಡಿಯಾದಲ್ಲಿ ಅವರ ಜನ್ಮವಾಗಿದ್ದರೆ ಲೋಕಮಾನ್ಯತಿಲಕರು, ಮಹಾತ್ಮ ಗಾಂಧಿಯವರು ಇವರಿಗೆ ಸಮಾನರಾದ ವಿಭೂತಿಗಳಾಗುತ್ತಿದ್ದರು. ಇಂಥಹ ಅನೂಲ್ಯವಾದ ರತ್ನವನ್ನಿಟ್ಟುಕೊಂಡು ನೀವು ರತ್ನವನ್ನು ಉಪಯೋಗಿಸಲು ತಿಳಿಯದ ಕೋತಿಯಂತೆ ವರ್ತಿಸುತ್ತಿದ್ದೀರಿ. ವೆಂಕಟಕೃಷ್ಣಯ್ಯನವರ ಪತ್ರಿಕೆಯನ್ನು ನಿಲ್ಲಿಸಿದರೆ ಅವರಿಗೇನು ಕಷ್ಟ? ಆ ಪತ್ರಿಕೆಯನ್ನು ನಿಲ್ಲಿಸಿದರೆ ನಿಮ್ಮ ಜಾತಿಗೆ ಬೀಗವನ್ನು ಹಾಕಿದ ಹಾಗಾಯಿತು. ನಾನು ಇಂಡಿಯಾ ದೇಶವನ್ನೆಲ್ಲಾ ಎಷ್ಟೋ ಆವರ್ತಿ ಸುತ್ತಿದ್ದೇನೆ. ಎಲ್ಲಿ ನೋಡಿದರೂ ಮೈಸೂರನ್ನು ಹೊಗಳುತ್ತಿದ್ದರು. ಈಗ ಎಲ್ಲಿ ನೋಡಿದರೂ ಮೈಸೂರನ್ನು ಬೊಗಳುತ್ತಿರುವರು. ನಿಸರ್ಯ್ಯ ನೀವು ಹೀಗೆ? ವೆಂಕಟಕೃಷ್ಣಯ್ಯನವರೊಂದರೆ ನಿಮ್ಮ ದೇಶಕ್ಕೆ ಅಲ್ಲಾ ಪಿತಾಮಹರೆನ್ನುತ್ತೀರಾ? ಅಂಥವರ ಪತ್ರಿಕೆಯನ್ನು ನಿಮ್ಮ ಸಂಸ್ಥಾರದವರು ನಿಲ್ಲಿಸಿರುತ್ತಾರೆಂದರೆ ಅದೇನು ನಾಚಿಕೆಗೇಡು ನಿಮ್ಮ ಸರ್ಕಾರವನ್ನು ನಡುಬೀದಿಯಲ್ಲಿ ಶರ್ಟುವದಕ್ಕೆ ಯೋಗ್ಯತೆಯಿಲ್ಲವೆ ಎಂದು ನನ್ನನ್ನು ಕೇಳುತ್ತಿದ್ದಾರೆ ಎಂದರು. ಅನಂತರ ಕೆಲವು ಮಹನೀಯರು ಕಳುಹಿಸಿದ್ದ ಪತ್ರಗಳು ಓದಲಾಯಿತು.

ರಾವ್ ಬಹದ್ದೂರ್ ಯಂ. ಸಿ. ರಂಗಯ್ಯಂಗಾರ್ಯರವರು.

ನನಗೆ ಸಬ್ಲಿಕ್ ವಿಷಯಗಳಿಗೆ ಸೇರಿಸಿ ಕಲಿ ಕ್ಷಿಕ್ಷಣದಿಂದ ವಿಷಯಗಳಲ್ಲಿಲ್ಲವೆಂದು ತಿಳಿಸಲು ಹೆಮ್ಮೆಪಡುತ್ತೇನೆ. ನನ್ನ ಸಂಘಕ್ಕೆ ಕಾಂಗ್ರೆಸ್ ಕಮಿಟಿಯವರು ಮಹಾಜನಗಳಿಗೆ ನನ್ನ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ಈಗ ಬಡಗಿಸಿರುವ ತೊಂದರೆಯು ನನಗೆ ಬಹಳ ಸಂಕಟವನ್ನುಂಟುಮಾಡಿದೆ. ಈ ತೊಂದರೆಗೆ ಅವರು ಎದಿಗೂ ಅರ್ಹರಲ್ಲ. ಅವರ ದೇಶಾಭಿಮಾನ, ಸ್ವಾರ್ಥತ್ಯಾಗ, ಮಹಾಜನ ಸೇವೆ ಇವುಗಳೆಲ್ಲವೂ ಎಲ್ಲರಿಗೂ ತಿಳಿದ ಸಂಗತಿಗಳೇ ಆಗಿವೆ. ಸರ್ಕಾರದವರು ಇಂತಹ ವೃದ್ಧರೊಡನೆ ಅನುಭವಸ್ಥರೊಡನೆ ಈ ರೀತಿಯಾದ ನಡವಳಿಕೆಯನ್ನು ನಡಸುವಾರದಾಗಿತ್ತು. ನನಗೆ ಒಂದು ಸಂಜೆ ಇದೆ. ಅದನ್ನು ತಮ್ಮ ಸುಖಾಂತರವಾಗಿ ಮಹಾಜನಗಳಿಗೆ ತಿಳಿಸುತ್ತೇನೆ. ಪ್ರಜೆಗಳು ಬಹಳ ಸಂಯಮದಿಂದಲೂ ಸಮ್ಯತೆಯಿಂದಲೂ ಶ್ರೀಮನ್ಮಹಾರಾಜರವರಿಗೆ ಅರಿಕೆಯನ್ನು ಮಾಡಿಕೊಂಡರೆ ಮ|| ವೆಂಕಟಕೃಷ್ಣಯ್ಯನವರಿಗೆ ಮಾಡುವ ಅನ್ಯಾಯವು ನಿವಾರಿಸಲ್ಪಡಬಹುದು.

ಮ|| ಎ. ಕೃಷ್ಣರಾಯರವರು.

ಮ|| ಎಂ. ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ಸರ್ಕಾರದವರ ವರ್ತನವನ್ನು ಖಂಡಿಸುವುದಕ್ಕಾಗಿ ನೀವು ಮಹಾಜನಗಳ ಸಭೆಯನ್ನು ಸೇರಿಸಿರುವುದು ಬಹಳ ಸಂತೋಷ. ಮ|| ವೆಂಕಟಕೃಷ್ಣಯ್ಯನವರಿಗೆ ಅವರ ಅಪರಾಧಗಳು ಏನು ಎಂಬುದನ್ನು ತಿಳಿಸದೆ ಕಾವು ನಿರ್ದೋಷಿಗಳೆಂದು ಅವರಿಗೆ ತಮ್ಮ ಪಕ್ಷವನ್ನು ವಾದಿಸಿಕೊಳ್ಳಲು ಅವಕಾಶವನ್ನು ಕೊಡದೆ ಪತ್ರಿಕೆಗಳನ್ನು ಹೀಗೆ ನಿಲ್ಲಿಸಿರುವುದು ಸರಿಯಲ್ಲ. ಈಗಿನ ಪತ್ರಿಕಾ ಕಾನೂನಿನ ಪ್ರಕಾರವಾಗಿ ಪತ್ರಿಕೆಗಳನ್ನು ನಿಲ್ಲಿಸುವ ಮೊದಲು ಕಾಸಿಪ್ಯುಡಿಷಿಯಲ್ ಯಾಕ್ಟಿಯರಿ ಮಾಡುತ್ತೇನೆಂದು ಸರ್ಕಾರದವರು ವಾಗ್ದಾನ ಮಾಡಿಯಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವರು ಆ ರೀತಿಯಾಗಿ ನಡೆದುಕೊಳ್ಳಲಿಲ್ಲ. ಶಾಂತಿಸಾಧನೆಯು ಪ್ರಯತ್ನವು ಮಾಡಿತ್ತಿರುವೆನೆಂದು ಹೇಳಿ ಪತ್ರಿಕೆಗಳ ಮೇಲೆ ಈ ರೀತಿ ದಬ್ಬಾಳಿಕೆಯನ್ನು ನಡೆಸಿತ್ತಿರುವುದು ಬಹಳ ವಿಷಾದಕರವು. ಸರ್ಕಾರದವರು ಈ ರೀತಿ ಮಾಡಿದ್ದರಿಂದ ಶಾಂತಿಯು ಬೇರೂರುವುದಕ್ಕೆ ಬದಲಾಗಿ ಸರ್ಕಾರದಲ್ಲಿ ಅಪನಂಬಿಕೆಯು ಹೆಚ್ಚಾಗುತ್ತದೆ. ಮ|| ಎಂ ವೆಂಕಟಕೃಷ್ಣಯ್ಯನವರು 50 ವರ್ಷಗಳಿಂದಲೂ ವಿಕ್ಟೀತಿಯಾಗಿ ನಿಸ್ವಾರ್ಥಬುದ್ಧಿಯಿಂದ ಪ್ರಜಾಸೇವೆಯನ್ನು ಮಾಡುತ್ತಿರುವರು. ಈಗ ಅವರಿಗೆ ಒದಗಿರುವ ತೊಂದರೆಗಾಗಿ ನಾನು ಬಹಳ ವಿಷಾದಪಡುತ್ತೇನೆ. ಆವರ ವಿಷಯದಲ್ಲಿ ನನ್ನ ಸಂಪೂರ್ಣ ಸಹಾನುಭೂತಿಯು ಇರುವುದು.

ಮ|| ಕೆ. ಚಂದ್ರಶೇಖರಯ್ಯನವರು (ಅಡ್ವೋಕೇಟ್)

ಈ ವಿಷಯದಲ್ಲಿ ನನ್ನ ಸಂಪೂರ್ಣ ಸಹಾನುಭೂತಿ ಇದೆ. ನಮ್ಮ ಪರಮಪೂಜ್ಯರೂ ದೇಶಾಭಿಮಾನಿಗಳೂ ಆದ ವೃದ್ಧಪಿತಾಮಹರಾದ ವೆಂಕಟಕೃಷ್ಣಯ್ಯನವರ ನಾಲ್ಕು ಪತ್ರಿಕೆಗಳು ನಿಸ್ಕಾರಣವಾಗಿ ಸರ್ಕಾರದಿಂದ ನಿಲ್ಲಿಸಲ್ಪಟ್ಟಿರುವುದನ್ನು ಕೇಳಿ ನನಗೆ ಅತ್ಯಾಶ್ಚರ್ಯವಾಯಿತು. ಈಗ ನಮ್ಮ ಸಂಸ್ಥಾನದಲ್ಲಿ ವೃತ್ತ ಪತ್ರಿಕೆಗಳಿಗೆ ಇರುವ ಸ್ವಾತಂತ್ರ್ಯಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯವು ಕೊಡಲ್ಪಡಬೇಕೆಂದು ವಿಶ್ವೇಶ್ವರಯ್ಯ ಸಮಿತಿಯವರು ಸಿಫಾರ್ಸು ಮಾಡಿರುವಾಗಲೂ ಸರ್ಕಾರದವರು ಈ ರೀತಿ ಸ್ವಪರ್ತಿಸಿರುವುದು ಮತ್ತೂ ಆಶ್ಚರ್ಯವಾಗಿದೆ. ಸ್ಮೃತಿಸಿಥಿನಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಈ ನೀಚವಾದ ಪ್ರೆಸ್ ಕಾನೂನನ್ನು ರದ್ದು ಮಾಡಬೇಕೆಂದು ನಿರ್ಣಯವಾಗಿ ಜರ್ಜೆ ನಡೆದು ಹಾಗೆ ಮಾಡಲು ಒಪ್ಪಿದ್ದರೂ ಆ ಮಾತನ್ನು ಸಂಪೂರ್ಣವಾಗಿ ಮರೆತುಬಿಟ್ಟು ಈ ಪತ್ರಿಕೆಗಳ ಮೇಲೆ ಗದಾಪ್ರಹಾರವನ್ನು ಹೂಡಿರುವುದು. ಇದರಿಂದ ಮ|| ವೆಂಕಟಕೃಷ್ಣಯ್ಯನವರಿಗೆ ಸ್ವತಃ ಎಳ್ಳಷ್ಟೂ ನಷ್ಟವಿಲ್ಲ. ಇದರಿಂದ ಮಹಾಜನರಿಗೆ ಬಹಳ ಅನರ್ಥ ಉಂಟಾಗಿರುವುದು. ನಿಮ್ಮ ವಿಚಾರಣೆಗಳಲ್ಲಿ ಪ್ರಾಡಲ್ಪಡತಕ್ಕ ಕಾರ್ಯಗಳಿಂದ ಸರ್ಕಾರದವರಿಗೆ ತಾವು ಮಾಡಿರುವ ತಪ್ಪನ್ನು ತಿದ್ದಿಕೊಂಡು ನ್ಯಾಯವನ್ನು ಸ್ಥಾಪಿಸುವ ಬುದ್ಧಿಯು ಉಂಟಾಗಲೆಂದು ಕೋರುತ್ತೇವೆ. ಕೇವಲ ಆಲಸ್ಯದಿಂದ ನಾನು ಈ ವಿಚಾರಣೆಗೆ ಬರಲಾಗದೆ ಇರುವುದರಿಂದ ವಿಷಾದಿಸುತ್ತೇನೆ.

ಮ|| ಬಿ. ನರಸಿಂಗರಾಯ ರು.

ಕಳೆದ 50 ವರ್ಷಗಳಿಂದಲೂ ವೃದ್ಧಪಿತಾಮಹರು ದೇಶಸೇವೆಗಾಗಿ ನಡೆಸಿಕೊಂಡು ಬರುತ್ತಿದ್ದ ನಾಲ್ಕು ಪತ್ರಿಕೆಗಳನ್ನೂ ಒಂದೇ ಏಟಿನಿಂದ ಸರ್ಕಾರದವರು ನಿಲ್ಲಿಸಿಬಿಟ್ಟಿರುವುದು ತುಂಬಾ ಶೋಚನೀಯವಾಗಿದೆ. ಪತ್ರಿಕೆಗಳಲ್ಲಿ ಯಾವದಾದರೂ ಲೋಪದೋಷಗಳಿದ್ದರೆ ಕಾನೂನಿನ ಪ್ರಕಾರವೇ ವಿಧಾಯಕವಾಗಿರುವ ಕ್ರಾಸ್ ಜ್ಯುಡಿಷಿಯಲ್ ವಿಚಾರಣೆಯನ್ನು ನಡೆಸಿ ಕಾರ್ಯಕ್ರಮ ನಡೆಸಬಹುದಾಗಿತ್ತು. ವೆಂಕಟಕೃಷ್ಣಯ್ಯನವರು ಎಲ್ಲೇ

[ಮುಂದಿನ ಪುಟ ನೋಡಿ.]

Regd No. M 2322 ॥ ವಂದೇ ಮಾತರಂ ॥ ಬಿಡಿಪ್ರತಿಗೆ ೫ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ವದೇಶಕ್ಕೆ ೫—೦—೦ / ಪರದೇಶಕ್ಕೆ ೧೦-೦-೦

ಸಂಪುಟ ೧] ಶುಕ್ರವಾರ ೧೧ ಜನವರಿ ೧೯೨೯ [ಸಂಚಿಕೆ ೯೨

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವ್ಗಳೂ ಅಮೃತಾಂಜನದಿಂದ ಗುಣವಾಗುತ್ತಿರುವ್ವು

ತಲೆನೋವು — ಕೆಮ್ಮು
ವಾತಶೂಲೆ — ನೆಗಡಿ
ಬೆನ್ನು ನೋವ್ವ — ಮುಟ್ಟು ಸಾಯ
ಕಟಿಶೂಲ — ಹುಣ್ಣುಗಳು
ಸಾಶ್ವರ್ಪಾಯು — ಉಳಕಿದ ನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ನಿಮ್ಮಾಪದಲ್ಲಿರಿಸಿಕೊಂಡಿರಿ.
ಸಿದ್ಧವೈದ್ಯನೋಪಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ —ಮಕ್ಕಳಿಗೆ ೧೪ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ ಅಜೀರ್ಣವಾಯುಗಳನ್ನು ಪರಿಹರಿಸುತ್ತದೆ. 30 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ ಕ್ಷಿಪ್ರವು ಮಿಶ್ರುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ಹವಾಗಳನ್ನೂ ಎಲ್ಲಾ ವೇಳೆಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ನುಚ್ಚು ದೊಡ್ಡವ ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ಶೀತವಾಯು ಪ್ಲೇಗು ಇನ್ಫ್ಲುಯೆಂಜ, ಕಾಲರಾ ಮುಂತಾದವನ್ನು ಬಾತರಿ ಗುಣಪಡಿಸುತ್ತದೆ. ಪ್ರತಿಮನೆಗಳಲ್ಲೂ ಇರಬೇಕಾದದ್ದು ಅತ್ಯವಶ್ಯಕ ಬೆಲೆ ೨ಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ಕೈಲ ಪರಿಮಳ್ಳ, ಲೇವಗಳು ಸಿದ್ಧವಾಗಿವೆ

ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ. ವಿ. ಪಂಡಿತರು,
ಸದ್ವೈದ್ಯಶಾಲಾ ಸಂಜನಗೂಡು

TO LET

ಪರೀಕ್ಷಿಸಿನೋಡಿರಿ! ಕ್ಷರೆ ಮಾಡಿರಿ॥

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧ ಪಾಡ

ಪ್ರಾಣಸಂಜೀವನ ಲೇಹ್ಯ.

ಇದರ ಸೇವನೆಯಿಂದ ಧಾತುಸಾಮ್ಯ ಅಜೀರ್ಣ, ಸೂತಿಕಾವಾತ, ಮೇಸವಾಯು, ಗರ್ಭವಾತ, ನಿದ್ರಾಭಂಗ್ಗ ನರಗಳ ದೌರ್ಬಲ್ಯ, ಮೂರ್ಛೋಪಾವಿಗಳು, ಕ್ಷಯ, ಉಬ್ಬಸ ಸ್ತ್ರೀಯರ ರಕ್ಷಣಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು. ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸಮಿಗದವರೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಚಾವದ ಹೂಗಳಿಕೆಯೆಂದು ಹೇಳದೆ ಕೆಲವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೆಚ್ಚು ನಂಗಳುವಿರಿ.

"ರರ್ಕ್ ರು ಒರ್ಕ್ ಕರೊ"

ಕ್ಕಯ 12 ತೊಲ ಡಬ್ಬಿ 1 ಕ್ಕೆ ರೂ. ೭—೮—೦
(ಬೆಸ್ಟ್ ಸಿಂಧೂರಗಳು ಸೇರಿರುವ) 4—೦—೦

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ ಸೆಸ್ಸಿನ ವಾತಜ್ವರ ಇನ್ಫ್ಲೂಯೆಂಜಾ ನ್ಯುಮೋನಿಯಾ ವಿಷಮಜ್ವರ ಪ್ಲೇಗು ಮೂರರ ಜ್ವರ ಭಳೆಜ್ವರ ಮಕ್ಕಳ ಎಳವು ಶೀತ ನೆಗಡಿ ಕೆಮ್ಮು ಅಜೀರ್ಣ ಮೊದಲಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣ ವಾದುದು. ಬಹು ಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ, ಡಿತವಾಗಿಯೂ ಒಹು ಜಾಗ್ರತೆ ಗುಣಪಡಿಸುವುದು.

ಬೆಲೆ ೫೦ ಮಾತ್ರೆಗಳ ಸೀಸೆ 1 ಕ್ಕೆ ೦—೮—೧
" 40 " " ೦—೪—೦

ವಿ. ಪಿ. ಥಾರ್ಜು ಪುತ್ಯೇಕ. ವ್ಯಾಪಾರಕ್ಕೆರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷ್. ನಮ್ಮಲ್ಲಿ ಅನೇಕ ವಿಧ ತೈಲ ಲೇಹ್ಯ ಮಾತ್ರೆ ಚೂರ್ಣ ಬಸ್ಮ ಅಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ —ವಿಳಾಸ
ಪಂಡಿತರು ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶ್ರಯ,
ಹಳೆ ಅಗ್ರಹಾರ ಮೈಸೂರು

Reserved for

M. S. SIDDAPPA & BRO...

1923 ನೆ ಇಸವಿಯ ಪಿಡ್ವರ್ಸ್ ನೂಡಲ್ ವಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದ. ಪೀಟ್ ಕ್ಯಾಲೆಂಡರ್ ವಾಕೆಟ್ ಕ್ಯಾಲೆಂಡರ್ ಮತ್ತು ಶ್ರೀ ವೆ.ಹಾವಿಷ್ಣುನಿಗೆ ಸುದರ್ಶನ ಪುದಾನ ನೂಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ಸ್ಪೆಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರನ್ಯೆದನರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟಲ್ ಪಾರ್ಸಲ್ ಮುಖಾಂತರ ಕಳುಹಿಸಲಾಗುತ್ತೆ. ವಿಳಾಸ — ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

ಶಕ್ತಿಯನ್ನು ಗುಣಪಡಿಸುವ **ಈರರ್ಕ್ ಮಿಶ್ರಿ ಹಲ್ವಾ** ವನ್ನು ಸೇವಿಸಿ.

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಗೆ ಸ್ವಪ್ನಸ್ಖಲನವಾಗುವಿಕೆ, ಅತಿ ಸ್ತ್ರೀಜೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನಯಾಗುವಿಕೆ, ಮೂತ್ರದ್ವಾರ ವ್ರಣ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶಕ್ತಿಯುಂಟಾಗುವಿಕೆ, ಮೋಹಪರಿ, ಶರೀರವು ನರಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, ಅಧಿಕ ಧಾತುವೃದ್ಧಿಯನ್ನುಂಟುಮಾಡಿ ಪರಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು:—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಅರ್ಬನ್ಸ್ಯಾಂಡರ್ಡ್ ಬಿಲ್ಡಿಂಗ್ಸ್, ಮೈಸೂರು.

ರರ್ಕ್ ಮಿಶ್ರಿ ಡಿಪೋ, ಜಾಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದೌಷಧಿಗಳು.

ಲಂಡನ್ನಿಗೆ ಪೀಟಾಡುವದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಈಷ್ಟೂರಿ ವಾತ್ಕಗಳಿಂದಲು ನಿನ್ನು ಪಡಿಪಿಲ್ಲರಲಿ.

ಪ್ರತಿ ದಿನ ತಂಬಿಲಪೂತನಾಗಲಿ, ಹಾಗೇ ಆಗಲಿ ೧—೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನಿರಿಗಳ ಕಿಡಸನ್ನ ಅಂಟುಗಡೊದೆ ಕಾಪಾಡುತ್ತದೆ.

ಮುಳ್ಳಿಗೆ ಎಳತಿ, ನೆಗಡಿ, ಕೆಮ್ಮುಲು, ಸೀತವಾತ ಜ್ವರ, ಚಳಿಜ್ವರ ಆಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ ಪ್ಲೀಹ ಯಕೃತ್ ಇನ್ಫ್ಲುಯೆಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮುಲ ಗೊಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದುಗಳು ಹಿಗ್ಗಿ ಮಲಬದ್ಧ ಹುಟ್ಟಿಲ್ಲದಿರುವಿಕೆ, ಬಲಹೀನತೆ ಇವನ್ನು ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಪಾಣಾಂತಿಯತಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ ವ್ಯಾಯಾಮವನ್ನು ಮಾಡಬಲ್ಲವಾಗಿದ್ದರೂ ಗೋಪಾಸ್ತ್ರೀಯರಿಗೂ ಆರೋಗ್ಯವರ್ಧಕವಾಗಿ.

250 ರಿಂದ 500 ಮಾತ್ರೆಗಳವರೆವಿಗಿನವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ ಟಪಾಲು ಖರ್ಚು ಸೇರಿ 1 ಸೀಸೆಗೆ ೦ಗೆ 8 6 ಕ್ಕೆ 1—8—0 ದೊಡ್ಡದು. 12 ಕ್ಕೆ 2—13—0 25 ಕ್ಕೆ ೫—3—0.

ಏಜೆಂಟ್ಸ್

ಮ್ಯಾನೇಜ್ಮೆನು
ಶ್ರೀ ಸೀತಾರಾಮಪ ವೈದ್ಯಶಾಲಾ,
ಚಿಕ್ಕಪೇಟೆ, ಬೆಂಗಳೂರು

ಭಿಷಗ್ರತ್ನ
ಪಾಳ್ಯದ ವೆಂಕಟಾಚಲ ಪಂಡಿತರ
ಶ್ರೀ ಸೀತಾರಾಮಪ ವೈದ್ಯಶಾಲಾ
ಹೆಡ್ಡಾಫೀಸು ಮೈಸೂರು



ಭಂಗಾರದ ಕೈಬಳೆಗಳೂ ಜೈನುಗಳೂ ವಜ್ರೆರ ಆಭರಣಗಳೂ ಜೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ನೋಡಿರಿ

ಯಸ್ ನರಸಿಂಹ ಅಯ್ಯರ್
ಕೆನಕರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ,
ನಗರ್ತಪೇಟ, ಬೆಂಗಳೂರು ಸಿಟಿ

TAI NADU.

Daily Edition.

The Leading Nationalist Daily of Mysore.

Printed and published by P. R. Ramaiya,
at Sri Rama Press, D. Subbiah Road Mysore.

ತಾ ಯಿ ನಾ ಡು.
10—1—1929.

ಬೆಂಗಳೂರು ಮಹಾ ಸಭೆ.

ಬೆಂಗಳೂರು ನಗರ 7 ನೇ ತಾ|| ಜನವರಿ ವೈಸೂರು ಪಟ್ಟಣದಲ್ಲಿ ಮು|| ಎಂ. ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ಹೊರಡುತ್ತಿದ್ದ ಮೈಸೂರ. ಪಟ್ರೀಯಟ್' ಸಾಪ್ತಿ. ಸಂಪದಭ್ಯುದಯ ಎಂಬ ವೃ ಮಂತ್ರಿಗಳನ್ನು ಸರ್ಕಾರದವರು ನಿಲ್ಲಿಸಿದುದಕ್ಕಾಗಿ ಬೆಂಗಳೂರು ನಗರದ ಮಹಾಜನರ ಅಸಮ್ಮತಾನವನ್ನು ಸೂಚಿಸುವುದಕ್ಕಾಗಿ ಈ ದಿನ ಸಾಯಂಕಾಲ ಗಾಂಧಿ ಮೈದಾನದಲ್ಲಿ ಶ್ರೀ|| ಸಿ. ಎಲ್. ಬೈಯಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆಸಲ್ಪಟ್ಟಿತು. ಅಧ್ಯಕ್ಷರು ಸರ್ಕಾರದವರು ಈ ರೀತಿ ಏಕಾಏಕಿ ಪತ್ರಿಕೆಗಳನ್ನು ನಿಲ್ಲಿಸಿದುದು ಅನ್ಯಾಯವೆಂದೂ ಆದಕ್ಕಾಗಿ ಅವರುಮೇಲೆ ಧಾವ್ಯಯುದ್ಧವನ್ನು ಸಾರುವುದೇ ಕರ್ತವ್ಯವೆಂದೂ ಒಂದು ಭಾಷಣವನ್ನಾಡಿದರು. ದಂಡಿನ ಅಡ್ವೋಕೇಟ್ ಜನರಾದ ಮು|| ಎಂ. ಪಸೀವರವರು ಪತ್ರಿಕೆಗಳನ್ನು ನಿಲ್ಲಿಸಬೇಕೆಂದು ಸರ್ಕಾರದವರ ಹುಕುಮನ್ನು ಖಂಡಿಸಿ ಅವರು ತಮ್ಮ ಅನ್ಯಾಯವಾದ ಆ ಹುಕುಮನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಆ ಹುಕುಮನ್ನು ವಾಪಸು ತೆಗೆದುಕೊಳ್ಳುವಂತೆ ಅಳವಡಿಸಲು ಮಹಾಸ್ವಾಮಿಯವರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ಒಂದು ರಾಜಾನ್ನು ಸೂಚಿಸಿದರು. ಶ್ರೀ|| ಹೊಸಪಳ್ಳಿ, ಕೆ. ವೀರಣ್ಣಗೌಡರೂ ಅಡ್ವೋಕೇಟು ಮು|| ಎಚ್. ಶ್ರೀನಿವಾಸ ಮೂರ್ತಿಯವರೂ ಆನು ಮೋದಿಸಿದರು. ಅಡ್ವೋಕೇಟ್ ಶ್ರೀ|| ಗುರುವಾರೆಡ್ಡಿಯವರು ಶ್ರೀ|| ಶ್ರೀನಿವಾಸಮೂರ್ತಿಯವರು ಹೇಳಿದುದನ್ನೇ ಪುನ್ಸ್ಕರಿಸಿ ಅಧಿಪತ್ಯಾದಂತೆ ನಡೆದ ಕೊಂಡು ಅವನ್ನು ಸಮಾಧಾನ ಪಡಿಸದಿದ್ದರೆ ಸರ್ಕಾರಕ್ಕೆ ಕಷ್ಟಗಾಲ ಒಂತೆಂಬುದು ನಾವು ಆವರೊಡನೆ ಹೇಳಬೇಕಾಗುತ್ತದೆ ಎಂದು ಭಾಷಣ ಮಾಡಿದರು.

ದಂಡಿನ ಮುನಿಸಿಪಲ್ ಕೌನ್ಸಿಲರ್ ಮಿ|| ಜರ್ನಿಯ (ಇವರು ಆಂಗ್ಲೋಯರು) ವರು, ಸರ್ಕಾರವೆಂದರೆ ನ್ಯಾಯಕ್ಕೆ ಮಾತೃಸ್ಥಾನವಾಗಿರಬೇಕು. ಸರ್ಕಾರದ ನಡತೆಯು ಅನ್ಯಾಯಕ್ಕೆ ಆಸ್ಪದವಿಲ್ಲದಂತಿರಬೇಕು. ದಂಡಿನ ಶ್ರೀ|| ರಾಜಗೋಪಾಲ ಮೊದಲಿಯಾರರು ಕಳೆದ ಇಂಸೇವಾರೀಪಿನವರಿಗೆ ಮೈಸೂರಿಂತಹ ರಾಜ್ಯವೂ ಮೈಸೂರು ಸರ್ಕಾರದಂತಹ ಸರ್ಕಾರವೂ ಇರಲಿಲ್ಲ. ಜುಲೈ 30ನೇ ತಾರೀಪಿನಿಂದೀಚೆಗೆ ಈ ಒಳ್ಳೆ ಹೆಸರುಗಳಿಗೆಲ್ಲ ಗ್ರಹಚಾರ ಬಂದಿತು. ಸರ್ಕಾರದವರ ನಡತೆಯು ಎಂದೆಂದಿಗೂ ನ್ಯಾಯವಾಗಿಲ್ಲ. ನುಡಿದ ತಂತೋನ್ಮೆಂಟನ್ನು ಮೈಸೂರು ಸರ್ಕಾರಕ್ಕೆ ಸೇರಿಸಿಬಿಡುವರೆಂದು ಕೇಳಿ ನಮಗೆಲ್ಲಾ ಸಂತೋಷವಾಗಿತ್ತು. ಈಗಿನ ಸರ್ಕಾರದ ನಡತೆಯನ್ನು ನೋಡಿದರೆ ನಾವು ಇಂಡಿಯಾ ಸರ್ಕಾರದವರ ಅಧೀನದಲ್ಲಿರುವುದೇ ಸುಖವೆಂದು ಕಾಣುತ್ತದೆ ಎಂದು ಭಾಷಣ ಮಾಡಿದರು.

ಅಧ್ಯಕ್ಷರು ತರಾವನ್ನು ನೆಫಿಕರ ಒಟಿಗೆ ಇಡಲು ಎಲ್ಲರೂ ಏಕವಾಕ್ಯತೆಯಿಂದ ಅಂಗೀಕರಿಸಿದರು, ಅಧ್ಯಕ್ಷರಿಗೆ ವಂದನೆಗಳು ಸಮರ್ಪಿಸಲ್ಪಟ್ಟಮೇಲೆ ಒಗ್ಗಟ್ಟಿಗೆ ಸಭೆಯು ವಿಸರ್ಜನೆಯಾಯಿತು. ಚಿ. ಗು.

ವಿವಿಧ ವಿಷಯಗಳು

ಬೆಂಗಳೂರು ಟೈಂಸ್

ಬೆಂಗಳೂರು ಟೈಂಸ್ ಪತ್ರಿಕೆಯು ಬೆಂಗಳೂರು ಸುಲ್ತಾನ್ ಪೇಟೆ ಸ್ಕೂಲಿನ ಎದುರುಗಡೆ ಇರುವ ಸೈಕಲ್ ಷಾಪಿನ ಮಹಡಿಯ ಮೇಲಿನ ಒಂದು ರೂಮಿನಿಂದ ಹೊರಡುತ್ತದೆಂದೂ ಅದೇ ಮಹಡಿಯಿಂದಲೇ ಜು.ತೈ 30ನೇ ತಾ|| ರಾತ್ರಿ ಗುಂಡುಗಳು ಹೊಡೆಯಲ್ಪಟ್ಟವೆಂದೂ ಬೆಂಗಳೂರು ಟೈಂಸ್ ಪತ್ರಿಕೆಯು ಆಗಲೇ ಮಾತಿನ ಗುಂಡುಗಳನ್ನು ಹೊಡೆಯುತ್ತಿರುವುದೆಂದೂ ಜನರು ತಿಳಿದುಕೊಳ್ಳಲಾರಂಭಿಸಿರುತ್ತಾರೆ.

ರಾಜದ್ರೋಹ.

ಕಲ್ಕತ್ತಾದ ಫಾರ್ವರ್ಡ್ ಪತ್ರಿಕಾಕರ್ತರ ಮೇಲೆ ಆಪರಗೆರಾಜದ್ರೋಹದ ಅಪರಾಧವು ಸಾಬೀತಾಗಿ 6 ತಿಂಗಳ ಸಾದಾ ಸಜಾ ವಿಧಿಸಲ್ಪಟ್ಟಿತು.

ಪೋಲೀಸ್ ಐ. ಜಿ.

ಮದರಾಸ್ ಪೋಲೀಸ್ ಕಮಿಷನರಾದ ಮಿ|| ಕಸಿಂಗ್‌ಹ್ಯಾಂ ರವರು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ರಾಗಿ ನೇಮಿಸಲ್ಪಡುವರೆಂದೂ ಮು|| ಹಿರಿಯಣ್ಣಯ್ಯನವರು ಕಿವಿನ್ಯೂ ಕಮಿಷನರಾಗಿ ನೇಮಿಸಲ್ಪಡುವರೆಂದೂ ಮಿ|| ಡಿಸ್ ಚಾಪರು ಎಕ್ಸಿಕ್ಯುಟೀವ್ ಕೌನ್ಸಿಲರಾಗಿ ನೇಮಿಸಲ್ಪಡುವರೆಂದೂ ಮು|| ಎಂ. ಎ. ಕೃಷ್ಣರಾಯರವರು ರಜಾಂದ ಮೇಲೆ ಹೋಗುವರೆಂದೂ ಬೆಂಗಳೂರಿನ ಪತ್ರಿಕೆಗಳೆಲ್ಲಾ ಬೊಬ್ಬೆಯಿಡುತ್ತಿರುವುವು.

ವಿಶ್ವೇಶ್ವರಯ್ಯ ಕಮಿಟಿ ವರದಿ.

ವಿಶ್ವೇಶ್ವರಯ್ಯ ಕಮಿಟಿಯ ವಂದಿಯ ಪೈಕಿ 38 ಪ್ರತಿಗಳು ಪ್ರಿಂಟಾದವೆಂದೂ ಎರಡು ಕಾಪಿಗಳು ಮಾಯವಾದವೆಂದೂ ಬೆಂಗಳೂರು ಟೈಂಸ್ ಪತ್ರಿಕೆಯು ತಿಳಿಸುತ್ತದೆ.

ಪಾಸಾಸಪ್ಪನ ಪೊಕದ್ದಮೆ.

ಮು|| ತಗಡೂರು ರಾಮಚಂದ್ರರಾಯರು ವ್ಯತ್ಯಾಂತ ಪತ್ರಿಕೆಯು ಪಾಸಾಸಪ್ಪನ ಪೊಕದ್ದಮೆಯಲ್ಲಿ ಜಸ್ಟಿಸ್ ಆಫ್ ದಿ ಪೀಸ್ ಕೋರ್ಟಿನವರು ಅಪರಾಧಿಯ ಮೇಲೆ ಛಾರ್ಜು ಮಾಡಿದೆ ಅನ್ಯಾಯ ನಡಿಸಿರುತ್ತಾರೆಂದು ಮೈಸೂರು ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಮಾಡಿರುತ್ತಾರೆ. ಆ ವಿಷಯ ವಿಚಾರಿಸಲು ಈ ತಿಂಗಳು 28ನೇ ತಾರೀಪಿನ ದಿನ ಹೀರಂಗು ಇಟ್ಟಿರುತ್ತಾರೆ.

ಜುಂಜನ ನಿರ್ಬಂಧ.

ಅಮೇರಿಕೆಯಲ್ಲಿ 10,00,000 ಕ್ಕೆ ಮೇಲ್ಪಟ್ಟ ಜನರು ಇಂಫ್ಲೂಯೆಂಜಾ ರೋಗಪೀಡಿತರಾಗಿರುವರೆಲ್ಲವೆ ಅದರ ಸೊಂಕು ಇಂಗ್ಲೆಂಡಿಗೂ ಯೂರೋಪಿಗೂ ಹರಡುತ್ತಿರುವುದು. ವಿಯನ್ನಾದ ಆರೋಗ್ಯ ಶಾಖೆಯವರು ಒನಾರೂ ಪರಸ್ಪರ ಮುತ್ತಿಡಕೂಡದೆಂದು ಕಟ್ಟಪ್ಪಣೆ ಮಾಡಿರುತ್ತಾರೆ!

ಕಾಂಗ್ರೆಸ್ ಪ್ರತಿನಿಧಿಯು ನೆರೆಹಿಡಿಯಲ್ಪಟ್ಟನು

ವಂದೇ ಮಾತರಂ ಸೈಮನ್ನರೇ ಹಿಂತಿರುಗಿ ಎಂದು ಬರೆದು ಕರಪತ್ರಗಳನ್ನು ಮುದ್ರಿಸಿ ರಾಷ್ಟ್ರಸಭೆಯ ಕಾಲದಲ್ಲಿ ಹಂಚಿದುದಕ್ಕೋಸ್ಕರ ರಾಜದ್ರೋಹವನ್ನೂ ಸಂಘಶೈಪತ್ಯವನ್ನೂ ಉಂಟುಮಾಡಿದನೆಂಬ ಅಪರಾಧದ ಮೇಲೆ ಕಲ್ಕತ್ತಾದ ಗುಪ್ತ ಪೋಲೀಸಿನವರು ಆತನನ್ನು ನೆರೆಹಿಡಿದ. ಕರಪತ್ರಗಳೆಲ್ಲವನ್ನೂ ತಮ್ಮ ಸ್ವಾಧೀನಕ್ಕೆ ತೆಗೆದು ಕೊಂಡರು.

ಬೆಲ್ಜಿಯಮಿಗೆ ಸೇರಿದ ಟರ್ನಾಂಟಿಗೆ ಉತ್ತರದಲ್ಲಿ ಇವ ಪ್ರದೇಶದಲ್ಲೆಲ್ಲ ಜಲಪ್ರಳಯವಾಗಿದೆ. ಭೀಕರವಾದ ಗಾಳಿಯು ಬೀಸುತ್ತಿದ್ದುದರಿಂದ ಒಂದು ನದಿಯಲ್ಲಿ ಪ್ರವಾಹವು ಉಕ್ಕಿ 7000 ಎಕರೆ ಭೂಮಿಯ ಮೇಲೆ ಬರಿದು 10000 ಜನರಿಗೆ ಬಹಳ ನಷ್ಟಸಂಭವಿಸಿರುತ್ತದೆ.

ಅಮೇರಿಕಾ ದೇಶದಲ್ಲಿ ಜುಟ್ಟ ತಯಾರುಮಾಡುವ ಯಂತ್ರಗಳು ಸದರಿ ಜುಟ್ಟಗಳನ್ನು ತಾವಾಗಿಯೇ ಮಾಯಾತ್ಮವೆಯಂತೆ. ಕೊಂಡುಕೊಳ್ಳುವವರು ನಾಣ್ಯವನ್ನು ಲದರೊಳಕ್ಕೆ ಹಾಕಿದ ಕೂಡಲೆ ಒಂದು ಜುಟ್ಟವನ್ನು ಈಚೆಗೆ ಕಳುಹಿಸಿ, ನಿಮಗೆ ವಂದನೆ ಎಂದು ಹೇಳುವುದಂತೆ.

ರಿಚರ್ಡ್ ಲೇಂಸ್ ಎಂಬ 17 ವರ್ಷದ ಬಾಲಕನು ಸ್ವತಃ ವಿಮಾನವೆನ್ನು ನಡೆಸಿಕೊಂಡು ಸ್ಯಾಕ್ ಫ್ರಾನ್ಸಿಸ್‌ಕೊದಿಂದ ಸುಮಾರು 3000 ಮೈಲಿಗಳ ದೂರದಲ್ಲಿರುವ ನ್ಯೂಯಾರ್ಕ್ ಪಟ್ಟಣಕ್ಕೆ ಕ್ಷೇಮವಾಗಿ ಹಾರಿ ತಲಪಿರುತ್ತಾನೆ. ಇದಕ್ಕಾಗಿ ಈತನಿಗೆ 3000 ರೂಪಾಯಿಗಳ ಬಹುಮಾನ ದೊರೆತಿದೆ.

ಬರ್ಮಾದಾ ದ್ವೀಪದಲ್ಲಿ ಪ್ರಾಣಿವೈಚಿತ್ರ್ಯಗಳಿರುವುವು. ಹಂದಿಯಂತೆ ಗುರುಗುಟ್ಟುವುದೊಂದು ಮೀನು, ಅಳಿಲಾಕಾರದಲ್ಲಿರುವ ಬೊಗುವಳುಮಿನೊಂದು, ಬೆಕ್ಕಿನಂತಿರುವ ಮಿಯೂವ್ ಎನ್ನುವ ಮೀನು, ಗುಟುರುಹಾಕುವ ದನದಜಾತಿಯ ಮೀನು ಇನ್ನೂ ನಾನಾ ವಿಧವಾದ ವಿಚಿತ್ರ ಧ್ವನಿಮಾಡುವ ಮೀನುಗಳು ಈ ಬರ್ಮಾದ ದ್ವೀಪದಲ್ಲಿ ಯಥೇಚ್ಛವಾಗಿರುವದಂತೆ.

ಕಾಬೂಲಿನಲ್ಲಿ ಜಯಶೀಲರಾದ ತಮ್ಮ ಸೈನಿಕರಿಗೆ ಆಫ್‌ಘಾನ್ ರಾಜರು ಎರಡು ತಿಂಗಳ ಸಂಬಳವನ್ನು ಬಹುಮಾನವಾಗಿ ಕೊಟ್ಟಿರುವರು. ನಾರ್‌ಬರ್ಜ್ ಎಂಬ ಗ್ರಾಮದಲ್ಲಿ ದಂಗೆಯಿಂದ ಬಹಳ ನಷ್ಟಹೊಂದಿದ ಬಡಪ್ರಜೆಗಳಿಗೆ ತಕ್ಕ ಪರಿಹಾರವನ್ನು ಕೊಟ್ಟಿರುವರು. ಕಾಬೂಲಿನಲ್ಲಿ ಚಳಿಯು ಹೆಚ್ಚಾಗಿರುವುದರಿಂದ ದಂಗೆಕೋರರ ಚಳಿವನೆಯು ಸದ್ಯಕ್ಕೆ ಪುನಃ ತಲೆದೋರುವ ಸಂದರ್ಭವು ತೋರುವುದಿಲ್ಲ.

TAI NADU
10—1—1929

ಅನ್ಯಾಯಕ್ಕೆ ಪ್ರತಿಭಟಿಸಿ

ನಮ್ಮ ಸಂಸ್ಥಾನದಲ್ಲಿ ಪ್ರಜಾಸ್ವಾತಂತ್ರ್ಯವು ಅಡುಮಲ್ಲಾಗುತ್ತಿರುವುದು. ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಪ್ರಜೆಗಳಿಗೆ ಅಲ್ಪಸ್ವಲ್ಪವಾದರೂ ಸರ್ಕಾರಗಳು ಹೆಚ್ಚು ಸ್ವಾತಂತ್ರ್ಯಗಳನ್ನು ಕೊಡುತ್ತಿರುವವು. ಪಾರ್ಲಿಮೆಂಟುಗಳನ್ನು ಸಂಪಾದಿಸುತ್ತಿರುವರು. ಲೋಕಲ ಸ್ವಾಯತ್ತಾಧಿಕಾರ, ವಾಕ್ ಸ್ವಾತಂತ್ರ್ಯ ಇವುಗಳಿಗೆ ಇರುವ ಅಡ್ಡಿ ಆತಂಕಗಳನ್ನು ತಗಲುಹಾಕುತ್ತಿರುವರು. ಇಂಗ್ಲೆಂಡಿನ ಒಂದು ಕಾಲದ ಸುದೀರ್ಘ ಇತಿಹಾಸವನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುವುದು. ಸಾರ್ಲಮೆಂಟಿಗೆ ಈಗ ಇರುವ ಸ್ವಾತಂತ್ರ್ಯವು ದೊರಯುವುದಕ್ಕಾಗಿ ಇಂಗ್ಲಂಡಿನಲ್ಲಿ ಅನೇಕ ಆಂದೋಲನಗಳು ನಡೆದು ಕಾಲ ಸಮಯದಲ್ಲಿ ರಾಜರುಗಳಿಗೆ ಕೂಡ ಶಿರಚ್ಛೇದನವಾಯಿತು. ಅದೂ ಒಬ್ಬಿಬ್ಬರು ಪ್ರಜೆಗಳು ತಮ್ಮ ಗೊರಿಯನ್ನು ಸುರಿಯಲೆ ಮೊದಲು ಎಂದಕ್ಕೆ ಸಗ್ಗುತ್ತಾ ಒಂದರು. ಫ್ರಾನ್ಸ್ ದೇಶದ ಇತಿಹಾಸವನ್ನು ನೋಡಿದರೂ ಇದೇ ಸ್ಪಷ್ಟವಾಗುವುದು. 18 ನೇ ಶತಮಾನದ ಅಂತ್ಯದಲ್ಲಿ ಫ್ರಾನ್ಸ್‌ನಲ್ಲಿ ನಡೆದ ಕ್ರಾಂತಿಯು ಈ ಪ್ರಜಾಸ್ವಾತಂತ್ರ್ಯಕ್ಕಾಗಿಯೇ ನಡೆಯಿತು. ಹೀಗೆಯೇ ಮುಂದುವರೆದ ಪ್ರತಿಯೊಂದು ದೇಶದ ಇತಿಹಾಸವನ್ನು ನೋಡಿದರೂ ಇದೇ ಸ್ಪಷ್ಟವಾಗಿ ಕಾಣುವುದು. ಬ್ರಿಟಿಷ್ ಇಂಡಿಯಾದಲ್ಲಿ ಕಾಂಗ್ರೆಸ್ ಸಂಸ್ಥೆಯು ಆರಂಭವಾದಾಗಿನಿಂದಲೂ ಇದೇ ಉದ್ದೇಶವು ನಡೆಯುತ್ತಿರುವುದು. ಬ್ರಿಟಿಷ್ ಇಂಡಿಯಾದ ಸ್ಥಳಗಳು ಹೋರಾಡುತ್ತಿರುವುದು ದೇಶಸ್ವಾತಂತ್ರ್ಯ ಮತ್ತು ಪ್ರಜಾಸ್ವಾತಂತ್ರ್ಯ ಇವುಗಳಿಗಾಗಿ. ಆದಕ್ಕಾಗಿ ಅವರು ಎಷ್ಟು ಕಷ್ಟಸಹಿಷ್ಣುರಾಗಿರುವುದು ನಾವು ಪ್ರತಿದಿನದಲ್ಲಿಯೂ ನೋಡುತ್ತಿರುವೆವು. ನಮ್ಮ ಸೈಕೋರಿನಲ್ಲಿ ಈ ಚೀಜಿಗ ಒಸಗಳ್ಳಿ ಪ್ರಜಾಸ್ವಾತಂತ್ರ್ಯದ ಹುಲುವು ಉದ್ದವಿಲ್ಲವೆಂದಾದರೂ ಈ ಸ್ವಾತಂತ್ರ್ಯವು ದೊರೆಯದೇ ಕಾದರೆ ನಮ್ಮ ನೆರೆಯವರಿಗಿಂತ ನಾವು ಹಿಂದುಳಿದವರಾಗುವೆವು. ಆದಕ್ಕಾಗಿ ಬಹಳ ಕಷ್ಟಸಹಿಷ್ಣುತೆ. ಪ್ರತಿಪಕ್ಷಾಮಾಯ ಪತ್ರಿಕೆಗಳಿಂದ ಅನೇಕ ಪತ್ರಿಕೆಗಳು ಸ್ಥಿರಸ್ಥಾಪಿಸಲ್ಪಡಬೇಕು. ಪ್ರ|| ಗಳಾದ ಸ್ವಾತಂತ್ರ್ಯಾಧಿಕಾರವೂ ಸಮಾಧಿಪ್ರಕಾಶವೂ ಅನೇಕರು ಜೈಲಿಗೆ ಹೋಗಲು ಸಿದ್ಧರಾಗಬೇಕು. ವ|| ರಾ|| ತಾವೂರು ರಾಮಚಂದ್ರಾಯರಂತೆ ಅನೇಕರು ಸತ್ಯಾಗ್ರಹಕ್ಕೆ ಸನ್ನದ್ಧರಾಗಬೇಕು. ರಾಷ್ಟ್ರಾದರೇನೇ ಪ್ರಜಾಸ್ವಾತಂತ್ರ್ಯವು ದೊರೆಯುವುದು. ಸುಮ್ಮನೆ ಆಂದೋಲಿಸಿದಾಯನಲ್ಲಿ ಕೂತಿರೆ ಅವರನ್ನು ಏಂದಿಸಿದರಾ ಸ್ವಾತಂತ್ರ್ಯವು ದೊರೆಯುವುದಿಲ್ಲ. ಈಗ ಮೈಸೂರಿನ ಸಾರ್ವಜನಿಕ ಜೀವನಕ್ಕೆ ಒತಾಸುಪಾದ ಪ್ರ|| ವೆಂಕಟಕೃಷ್ಣಯ್ಯನವರ ಪತ್ರಿಕೆಗಳು ಸ್ಥಿರಸ್ಥಾಪಿಸಲ್ಪಟ್ಟಿರುವವು ಬೇರೊಂದು ಪ್ರಾಂತ್ಯವು ಲಭ್ಯವಾಗಿದ್ದರೆ ಸರ್ಕಾರದವರು ಪಾಡಿರುವ ಇಂತಹ ಪ ಕೂಡಲಾರ್ಥಕ್ಕಾಗಿ ಉಲ್ಬಣವಾದ ಚಳುವಳಿಯು ಏಳುತ್ತಿತ್ತು. ನಮ್ಮ ಸೈಕೋರಿನವರಿಗೆ ಇಷ್ಟೂ ಆ ಪ್ರಜ್ಞೆ ಇಲ್ಲವಾಗಿ ಆಪೆಂದರಿಂದಲೇ ಸರ್ಕಾರದವರು ಏಂ

ಹಿಂದೂಗಳ ಮೇಲಿನ ಮೊಖದಮೆಗಳು.

ದಿ

ಸರ್ಕಾರದವರು ಹಿಂದುಗಳ ಮೇಲೆ ಹಾಕಿದ್ದ 9 ಮೊಖದ್ದಮೆಗಳನ್ನು ವಾಪ್ಸು ತೆಗೆದುಕೊಂಡಿರುವರೆಷ್ಟೆ. ಈ ಸಂಬಂಧವಾಗಿ ಅವರು ತೋರಿಸಿರುವ ಕಾರಣಗಳು ಅಷ್ಟು ಕೃತ್ರಿಮಕರವಾಗಿಲ್ಲ ಹಿಂದುಗಳು ನಿರಪರಾಧಿಗಳು. ಆದಕ್ಕೋಸ್ಕರವಾಗಿ ನಾವು ಮೊಖದ್ದಮೆಗಳನ್ನ ವಾಪ್ಸು ತೆಗೆದುಕೊಂಡಿದ್ದೇವೆ ಯೆಂದು ಹೇಳಿದ್ದರೆ ಆದು ಸಭ್ಯವಾಗುತ್ತಿತ್ತು, ಆದರೆ ಅವರು ಆ ಕಾರಣವನ್ನು ತೋರಿಸಿಲ್ಲ. ಬೆಂಗಳೂರಿನಲ್ಲಿ ಶಾಂತಿಸ್ಥಾಪನೆ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಈ ಮೊಖದ್ದಮೆಗಳನ್ನು ವಾಪ್ಸು ತೆಗೆದುಕೊಂಡಿದ್ದೇವೆ ಎಂದು ಹೇಳಿರುವರು. ಇದು ಅನುಮಾನಕ್ಕೆ ಅವಕಾಶ. ಎಶ್ವೇಶ್ವರಯ್ಯ ಕಮಿಟಿಯವರು ಹಿಂದುಗಳು ನಿರಪರಾಧಿಗಳೆಂದು ತೀರ್ಮಾನ ಮಾಡಿದರು. ಅಬ್ಬಾಸ್ ಖಾನರ ಮನೆಯಿಂದಲೂ ಮತ್ತ ಸುತ್ತಮುತ್ತಲಿನಿಂದಲೂ ಗುಂಡು ಹೊಡೆದು, ಅಂಗಡಿ ಮೊದಲಾದವುಗಳಿಂದ ನಿರಾಯುಧರಾದ ಹಿಂದುಗಳನ್ನು ಹೊಡೆದ ಮಹಮ್ಮದೀಯರೇ ಅಪರಾಧಿಗಳೆಂದು ತೀರ್ಮಾನ ಮಾಡಿರುವರು. ಈ ಅಪರಾಧಿಗಳಿಗೆ ಶಿಕ್ಷೆಯಾಗಬೇಕೇಕ. ಇನ್ನೂ ಅನೇಕ ಅಪರಾಧಿಗಳು ತಪ್ಪಿಸಿಕೊಂಡಿರುವರು. ಅವರಿಗೂ ಶಿಕ್ಷೆಯಾಗಬೇಕು. ಅಬ್ಬಾಸ್‌ಖಾನರ ಮೇಲೆಯೂ ಪ್ರಬಲವಾದ ಆಪಾದನೆಗಳಿವುದವು. ಅವರಿಗೂ ವಿಚಾರಣೆಯಾಗಿ ಶಿಕ್ಷೆಯಾಗಬೇಕು. ಶಾಂತಿ ಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಇವರೆಸ್ಟೆಲ್ಲಾ ಬಿಟ್ಟು ಬಿಟ್ಟರೆ ಶಾಂತಿಗೆ ಒದಲಾಗಿ ದೇಶದಲ್ಲಿ ಅತಶಾಂತಿಯು ಪ್ರಬಲವಾಗುವುದು. ದುಷ್ಟನಿಗ್ರಹವೇ ಶಾಂತಿಗೆ ಮೂಲಕಾರಣ. ದುಷ್ಟನಿಗ್ರಹ ಮಾಡದೆ ಶಾಂತಿಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಹೊರಟರೆ ಅವರ ಪ್ರಯತ್ನವೆಲ್ಲಾ ವಿಫಲವಾಗುವುದು. ಮುಖ್ಯವಾಗಿ ಹಿಂದೂ ಮಹಮ್ಮದೀಯ ಸಮಸ್ಯೆಯೇ ಅಲ್ಲ. ದುಷ್ಟರ ಮತ್ತು ಸರಕಾರದವರ ಸಮಸ್ಯೆ. ಸರ್ಕಾರದವರು ನಿರ್ಭಯವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ, ನಿಷ್ಪಕ್ಷಪಾತವಾಗಿಯೂ ದುಷ್ಟರನ್ನು ದಂಡಿಸಲೇಬೇಕು.

ಪ್ರ|| ಸೋಮಶೇಖರರಾಯರ ಅಭಿಪ್ರಾಯ.

ವಿಶ್ವೇಶ್ವರಯ್ಯ ಕಮಿಟಿ ವರದಿಯು ಇನ್ನೂ ಸರ್ಕಾರಕ್ಕೆ ಒಪ್ಪಿಯನ್ನು ಕಲಿಸಿಲ್ಲ ಶಾಸ್ತ್ರಿಪ್ರಯತ್ನವನ್ನು ಪ್ರೆಸ್ ಮಾಡುತ್ತಿದ್ದಾರಂತೆ! ಬಹುಶಃ ಇದೇ ಶಾಂತಿ ಪ್ರಯತ್ನದ ಪ್ರಾಪಣಿಕೆಯೆ ಕಾರುಹು. ಕೆಲವು ಅಧಿಕಾರಿಗಳು ತಮ್ಮ ಅಪರಾಧಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ಭೂಮಿ ಆಕಾಶಗಳನ್ನು ಒಂದುಮಾಡುತ್ತಿರುವರು. ಇವರ ಪ್ರಯತ್ನಗಳು ಎಂದಿಗೂ ಸಾರ್ಥಕವಾಗುವುದಿಲ್ಲ.

ರು ಅನ್ಯಾಯವಾದ ಮೇಲೆ ಇನ್ನೊಂದು ಅನ್ಯಾಯ ಮಾಡುತ್ತಾ ಹೋಗುತ್ತಿರುವರು. ಅನ್ಯಾಯವನ್ನೆ ಸಹಿಸುವುದಿಲ್ಲ ಎಂದ ನಾವು ಪ್ರತಿಪಟಿಸಿದವೇನೇ ಅನ್ಯಾಯಗಳು ಕಡಿಮೆಯಾಗುವವು ಈಗ ಬೇಕಾಗಿರುವುದು ಪ್ರತಿಭಟನೆ ಈ ಪ್ರತಿಭಟನೆಗಾಗಿ ನಮ್ಮ ಸಂಸ್ಥಾನದಲ್ಲಿ ಸಿದ್ಧತೆ ಇರುವುದೆಂದೇ ನೋಡೋಣ.

ಅಬ್ಬಾಸ್‌ಖಾನರ ಮನೆಗೆ ಎಳೆಯಲ್ಪಟ್ಟ ನಾಲ್ಕು ಹುಡುಗರ ವಿಚಾರ.

ವಿಶ್ವೇಶ್ವರಯ್ಯ ಕಮಿಟಿಯ ವರದಿಯಲ್ಲಿ ಮೇಲಿನ ವಿಷಯವಾಗಿ ನಿಶ್ಚಿತವಾದ ಯಾವ ಅಭಿಪ್ರಾಯವೂ ಬಂದಿರುವುದಿಲ್ಲ. ಆದರೂ ಒಸಗಳಲ್ಲ ಈ ವಿಷಯವಾಗಿ ಅಸಮಂಜಸಿಕೆಯು ಜಾಸ್ತಿಯಾಗಿದೆ ಎಂಬುದನ್ನು ಕಮಿಟಿಯವರು ಸ್ಪಷ್ಟಪಡಿಸಿರುವರು. ಈ ಅಪಸಂಜಸಿಕೆಯು ಹೋಗುವುದಕ್ಕಾಗಿ ಈ ವಿಷಯವನ್ನು ಕ ರಿತು ಸ್ವತಂತ್ರವಾದ ಮತ್ತು ನಿಷ್ಪಕ್ಷವಾತವಾದ ವಿಚಾರಣೆಯನ್ನು ನಡೆಯಿಸಬೇಕೆಂ ಸೂಚಿಸಿದರು. ಇದು ಸಾಧುವಾದ ಸಲಹೆ. ಜನಗ ಲ್ಲಿ ಅಪಸಂಜಸಿಕೆಯು ಹೋಗಹೋರತು ಸಂಸ್ಥಾರದಲ್ಲಿ ವಿಶ್ವಾಸನೂಡುವುದಿಲ್ಲ. ಸಂಸ್ಥಾರದಲ್ಲಿ ವಿಶ್ವಾಸವು ನಲಸಿದಹೊರತು ದೇಶದಲ್ಲಿ ಶಾಂತಿಯಿಲ್ಲ. ಆದುದರಿಂದ ಸರ್ಕಾರದವರು ಈ ವಿಷಯವಾಗಿ ಕೂಡಲೆ ತನಿಯೆಯನ್ನು ನಡೆಯಿಸಬೇಕೆಂದು ಕೋರುತ್ತೇವೆ.

ಸರ್ಕಾರದವರ ಮೌನ.

ಅಬ್ಬಾಸ್‌ಖಾನರ ಮೇಲೆ ಪೋಲೀಸ್ ಇಲಾಖೆಯ ವರಾಗಲ ಮ್ಯಾಜಿಸ್ಟ್ರೇಟರಾಗಲಿ ಕಾರ್ಯಭಾಗವನ್ನು ನಡೆಯಿಸಿದ ವಿಷಯದಲ್ಲಿ ಕಮಿಟಿಯವರು ತಮ್ಮ ಅಸ ವಾಧಾನವನ್ನು ಸೂಚಿಸಿದ್ದಾರೆ. ಸರ್ಕಾರದವರು ಹಾಗೇನಾದರೂ ಅಬ್ಬಾಸ್ ಖಾನರಮೇಲೆ ಕಾರ್ಯಭಾಗವನ್ನು ನಡೆಯಿಸಕೂಡದೆಂದು ಸಲಹೆಯನ್ನು ಸರ್ಕಾರದ ಮಟ ಕೊಟ್ಟರೆ? ಎಂಬ ವಿಷಯವನ್ನು ವಿಮರ್ಶಿಸಿ, ರುಜುವಾತು ಯಾವುದೂ ಇಲ್ಲ ಎಂದು ಕಮಿಟಿಯ ವರು ಹೇಳಿರುವರು. ಆದರೂ ಸರ್ಕಾರದವರು ಪೋಲೀಸ್ ಇಲಾಖೆಯವರನ್ನೂ ಮ್ಯಾಜಿಸ್ಟ್ರೇಟರನ್ನೂ ನೀವು ಅಬ್ಬಾಸ್‌ಖಾನರ ಮೇಲೆ ಏತಕ್ಕೆ ಕಾರ್ಯಭಾಗವನ್ನು ನಡೆಸಲಿಲ್ಲ ಎಂದು ಇದುವರೆಗೂ ಕೇಳಿಲ್ಲ. ಇದೇ ಅನುಮಾನಕ್ಕೆ ಕಾರಣ. ಸರ್ಕಾರದವರು ಮಾಡಿರುವುದರಲ್ಲಿ ಇದೊಂದು ದೊಡ್ಡ ಕರ್ತವ್ಯಲೋಪ. ಇದನ್ನು ಉದ್ದೇಶ ಪೂರ್ವಕವಾಗಿ ಮಾಡಿದರೋ ಅಥವಾ ಉದ್ದೇಶ ವಿರಲಿಲ್ಲವೋ ಎಂಬುದನ್ನು ನಿಶ್ಚಯವಾದವಾಗಿ ಹೇಳುವುದಕ್ಕಾಗುವುದಿಲ್ಲ. ಬುಲ್ಲೆ 30 ನೇ ತಾರೀಖಿನ ರಾತ್ರಿ ಅಬ್ಬಾಸ್ ಖಾನರ ಮನೆಗೆ ಹೋಗಿ ತಮಗೆ ಸರಕ್ಷಣೆ ಮಾಡಬೇಕೆಂದು ಪೋಸ್ ಮಾಡಿದ ಸಂಗತಿಯೂ ದಿವಾನರ ಆಫೀಸಿನ ಸೂಪರಿಂಟೆಂಡಂಟರಾದ ಪಲಪಸಾಮಿಯವರು ಮಿಲಿಟರಿಯನ್ನು ಅಬ್ಬಾಸ್ ಖಾನರ ಮನೆಯ ಕಡೆಗೆ ಹೋಗಬೇಕೆಂದು ಕಳುಹಿಸಿದ ಕತೆಯೂ ಪೂರನೆಯ ದಿನಸ ಗುಂಡು ಹೋದದ್ದು ನಿಜವೆಂದು ಊರಲ್ಲೆಲ್ಲರಿಗೂ ಗೊತ್ತಿದ್ದರೂ ಅಬ್ಬಾಸ್ ಖಾನರ ಮನತಿನಂತೆ ಸರ್ಕಾರದವರು ಗುಂಡು ಹೊಡೆದದ್ದು ಸುಳ್ಳೆಂದು ಸ್ಪಷ್ಟಪಟಿಸಿದುದು ಅಬ್ಬಾಸ್ ಖಾನರು ಕೋರ್ಟಿನಲ್ಲಿ ದಿವಾನರನ್ನೂ ಸರ್ಕಾರವನ್ನೂ ತಮ್ಮ ಜೊತೆಗೆ ಸೇರಿಸಿಕೊಂಡಿರುವುದು ಇವೆಲ್ಲಾ ಅನುಮಾನವನ್ನು ಧೃಢಪಡಿಸುತ್ತವೆ ಈ ಭಾಗದಲ್ಲಿ ಸರ್ಕಾರದವರು ತಮ್ಮ ಮೇಲೆ ಬಂದಿರುವ ಅಪಕ್ಷಾತಿಯನ್ನು ಯಾವ ರೀತಿ ಕಳೆದುಕೊಳ್ಳುವರೋ ನೋಡಬೇಕು.

Regd No. M 2322 ‖ ವಂದೇ ಮಾತರಂ ‖ ಬಿಡಿಪ್ರತಿ ೩ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ.
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ಅಂಚೆಯಲ್ಲಿ ೫—೦—೦ / ಸರಪಣಿಯಲ್ಲಿ ೧೦-೦-೦

ಸಂಪುಟ ೧] ಗುರುವಾರ ೧೦ ಜನವರಿ ೧೯೨೯ [ಸಂಚಿಕೆ ೯೧

ಆರೋಗ್ಯದ ಮೂರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುವು

ತಲೆನೋವು	ಕೆಮ್ಮು
ವಾತಶೂಲೆ	ಸೆಗಡಿ
ಬೆನ್ನು ನೋವು	ಸುಟ್ಟ ಘಾಯ
ಕಟಿಶೂಲೆ	ಹುಣ್ಣುಗಳು
ಶಾಸ್ತ್ರವಾಯು	ಉಳುಕಿದ ನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸಮಾಪದಲ್ಲಿರಿಸಿಕೊಂಡಿರಿ.
ಸಿದ್ಧ ವೈದ್ಯನೋಪಾದಿಯಲ್ಲಿ ಸಮಸ್ತ ರೋಗಗಳನ್ನೂ ಕಡಿಹಲಿಸುತ್ತದೆ.

ಜಾಲಸಂಜೀವಿನಿ:—ಮಕ್ಕಳಿಗೆ ೧-೪ ವೇಳೆ ಸುಪವಾಗಿ ಭೇದಿನಾಡಿಸಿ ಸಮಸ್ತ ವಿಧ ಪ್ರಕಾರ ಅಜೀರ್ಣವಾಯುಗಳನ್ನು ಕಿರಂಗಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ:—ಇಳಿವು ಮಿಳುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ಕಾಂಬೂಲದೊಡನೆ ಸೇವಿಸಿದರೆ ಎಲ್ಲಾ ಹವಾಗಳನ್ನೂ ಎಲ್ಲಾ ದೇಸಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ಹೊಡ್ಡವರ ಕೆಮ್ಮು, ನೆಗಡಿ, ಇರ್ರ ಹಲ್ಲುನೋವು ಶೀತವಾಯು, ಪ್ಲೇಗು ಇನ್ಫ್ಲುಯೆಂಜ, ಕಾಲರಾ ಮುಂತಾದವನ್ನು ಖಾತರಿ ಗುಣಪಡಿಸುತ್ತದೆ. ಶತಸಾವಿರಕ್ಕೂ ಇರಬೇಕಾದದ್ದು ಅತ್ಯವಶ್ಯಕ ಬೆಲೆ ೫೦ ೧ ಕ್ಕೆ 4 ಆಣೆ

ಬಿಲುಕಾಲಕ್ಕೆ ಅನುಕೂಲವಾದ ಕೈಲ ಪರಿಚಿತ್ತು ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾ ಭಿಷಗ್ರತ್ನ ಬಿ. ವಿ. ಪಂಡಿತರು,
ಸದ್ವೈದ್ಯಶಾಲಾ ಸಂಜನಗೂಡು

TO LET

ಪರೀಕ್ಷಿಸಿ ನೋಡಿರಿ! ಕ್ಷಮೆ ಮಾಡಿರಿ ‖
ಪಂಡಿತ ಮುದ್ಗಲ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ
ಪ್ರಾಣಸಂಜೀವನೆ ಲೇಹ್ಯ.

ಇದರ ಸೇವನೆಯಿಂದ ಧಾತುಸ್ರಾವ ಅಜೀರ್ಣ, ಸೂತಿಕಾವಾತ, ಮೇಳವಾಯು, ಗರ್ಭವಾತ, ನಿದ್ರಾಭಂಗ್ಯ ನರಗಳ ದೌರ್ಬಲ್ಯ, ಮೂತ್ರೋಸಾಧಿಗಳು, ಕ್ಷಯ, ಉಬ್ಬಸ ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಆಸದೃಶವಾದುದು. ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ನೇಮಿದವರೇಕರು ದೃಢನಂತಾಸವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ಹೇಳದೆ ಕೆಲವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೆಚ್ಚು ಹೊಗಳುವಿರಿ.

"ಧರ್ಮ ಕು ಜರ್ಮ ಕರೊ"

ಕೃಯ 12 ತೊಲ ಡಬ್ಬಿ 1 ಕ್ಕೆ ರೂ. ೭—೮—೦
(ಭಸ್ಮ ಸಿಂಧೂರಗಳು ಸೇರಿರುವ) 4—೦—೦

ಜ್ವರಕೇಸರೀ ನೂತ್ರೆ

ಇದು ಮಲೇರಿಯಾ ಸನ್ನಿವಾತಜ್ವರ ಇನ್ಫ್ಲೂಯೆಂಜಾ ನ್ಯುಮೋನಿಯಾ ವಿಷಮಜ್ವರ ಪ್ಲೇಗು ಮೂರರ ಜ್ವರ ಬಹಿಜ್ವರ ಮಕ್ಕಳ ಎಳವು ಶೀತಕೆಗಡಿ ಕೆಮ್ಮು, ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣ ವಾದುದು ಬಹು ಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ, ಹಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1 ಕ್ಕೆ ೦—೮—೦
" 40 " " ೦—೪—೦

ವಿ. ಪಿ. ಭಾರ್ಜು ಪ್ರತ್ಯೇಕ ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ ಲೇಹ್ಯ ಮಾತ್ರೆ ಜೂರ್ಣ ಭಸ್ಮ ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—
ಪಂಡಿತ ಮುದ್ಗಲ ರಾಮಚಂದ್ರಾಚಾರ್ಯರು,
ಆಯುರ್ವೇದಾಶಯ,
ಹಳೇ ಆಗ್ರಹಾರ ಮೈಸೂರು

Reserved for

M. S. SIDDAPPA & BROS.

1929 ನೇ ಇಸವಿಯ ಪಿಕ್ಚರ್ ವಾಲ್ ಪಾಕೆಟ್ ಕ್ಯಾಲೆಂಡರುಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಷೀಟ್ ಕ್ಯಾಲೆಂಡರ್ ಪಾಕೆಟ್ ಕ್ಯಾಲೆಂಡರ್ ಮತ್ತು ಲೇಡಿ ಹಾಂಡ್ಸಮ್ ಸೈಜಿನ ಸುಂದರ ಸುದಾಸ ಮಾಡುವ ಪಂಚಾಂಗಸಹಿತ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪೈನ್ಸಿನ ಪಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಪಾತಿನಿ ಬಂದು ನೋಡಿರಿ. ಸರಸ್ವತಿದಯರು 5 ಆಣೆ ರವಾನಿಸಿದಲ್ಲಿ ವೇಲ್ಯೂಎಂಡ 3 ನಮೂನೆ ಕ್ಯಾಲೆಂಡರುಗಳನ್ನು ವೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಬಿ. ಸಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

ತಕ್ಷಣ ಗುಣವಿಸುವ **ಈರರ್ಕ್ ಮಿಶ್ರಿ ಹಲ್ವಾ** ವನ್ನು ಸೇವಿಸಿ.

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ವೀರ್ಯಾಗಿರುವಿಕೆ, ಆಗಾಗ್ಗೆ ಸ್ವಪ್ನಸ್ಖಲನವಾಗುವಿಕೆ, ಆ ಸ್ತ್ರೀಸ್ಪರ್ಶೆಯಿಂದಲೂ, ಅನೇಕ ದುರ್ಭೋಗಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ವೀರ್ಯಸ್ಖಲನೆಯಾಗುವಿಕೆ, ಮೂತ್ರದ್ವಾರ ವ್ರಣ ಮತ್ತು ಮೇಹಪ್ರಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಜರ್ಜರಗತವ್ಯಾಧಿ, ಕೈಕಾಲುನೋವು, ನಿಶಕ್ತಿಯು ಬರುವಿಕೆ, ಮೇಹಪಸರಿ, ಶರೀರವು ನರಿಸಿ ಕಾಂತಿ ಹೀನವಾಗುವಿಕೆ ಇಂಥೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, ಅಧಿಕ ಧಾತುವೃದ್ಧಿಯನ್ನುಂಟುಮಾಡಿ ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕೊಡಿಸುವುದು.

ಯಾವುದು ಸೇವಿಸಿದಲ್ಲಿ ಗುಪ್ತಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿಕ್ 1 ಕ್ಕೆ 5—0—0 ಅರ್ಧ ಪೌಂಡ್ ಟಿಕ್ 1 ಕ್ಕೆ 2—8—0

ಮೈಸೂರು ಸಿಟಿ ಏಜೆಂಟರು:—ಬಿ ಸಿಟಿ ಮೆಡಿಕಲ್ ಸ್ಟೋರ್ಸ್, ಜನರಲ್ ಏಜೆಂಟ್ಸ್, ಅಡ್ವರ್ಟೈಸರ್ಸ್ ಬಿಲ್ಡಿಂಗ್ಸ್, ಮೈಸೂರು.

ರರ್ಕ್ ಮಿಲ್ಸ್ ಡಿಪೋ, ಚಾಮರಾಜೇಶ್ವರಿ ಗುಡಿ ಬೀದಿ, ಬೆಂಗಳೂರು ಸಿ

"ಧನಗುಪ್ತ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.

ಒಂದು ಬಳಕೆ ಕೆಟ್ಟಾಡುವುದಕ್ಕಿಂತ ಮೊದಲು ಬಾರದಂತೆ ತಡೆಹಿಡಿಯುವ ಸರ್ವೋತ್ತಮವಾದ ಔಷಧವು ಲೋಕಾಮಯದಲ್ಲಿ ಕಷ್ಟಿಂದ ದೊರತ್ತಿಗಳಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊತನಾಗಲಿ, ಹಾಗೆ ಆಗಲಿ ೧—೨ ಸ್ಪೂನು ಸೇವಿಸುತ್ತಿದ್ದರೆ ಜೀರ್ಣಕ್ರಿಯೆಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕಷ್ಟವನ್ನು ಅಂಟುಗೊಡದೆ ಕಾಪಾಡುತ್ತದೆ.

ಮುಳ್ಳಿ ಎಳತ್ತಿ, ನೆಗಡಿ, ಕೆಮ್ಮುಲು, ಸೀತವಾತ ಜ್ವರ, ಚಳ್ಳಾರ ಅಜೀರ್ಣದ ಬೇಧಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮೊದಲಾದ ಪ್ರೇಗಿಸಿ ಜ್ವರ ಇನ್‌ಫ್ಲುಯೆಂಜ, ರಕ್ತಹೀನತೆ ದುರ್ಬಲ ಇತ್ಯಾದಿಗಳನ್ನು, ಪೆಡ್ಡವರ ಜ್ವರ, ಬಳಲಿಕೆ, ಕೆಮ್ಮಲ ಗೂಬು, ನೆಗಡಿ, ಅಜೀರ್ಣದ ಹೊಟ್ಟೆನೋವು, ಸೀತವಾತಗಳಿಂದ ಕಂದುಗಲು ಹಿಡಿದ ಮಂಬಲದ್ದ ಹಸುಳೆಯ ದಿಢೀರಿಯಿಕೆ, ಬಲಹೀನತೆ ಇವೇ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಪ್ರಾಣಾಂತಿಯತೆಗೆ ಕಷ್ಟೂರಿಗೆ ಒದಲಾಗಿ ಈ ಮಾತ್ರೆಗಳು ಸಂಜೀವನ ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಪಾಸ್ತ್ರೀಯರಿಗೂ ಅರೋಗ್ಯಸಂವರ್ಧಕವು.

25ರಿಂದ 30 ಮಾತ್ರೆಗಳದಿರುವ ಸೀಸೆ 1 ಕ್ಕೆ 0—4—0 ಮೇರೆ ಅಂಚೆ ಖರ್ಚಿಗಳಲ್ಲಿಯೂ ಹೊರಬೀಳುತ್ತದೆ. ವಿಪಾಲು ಖರ್ಚು ಸೇರಿ 1 ಸೀಸೆಗೆ ಅಂಚೆ, 8 ಕ್ಕೆ 1—8—0 ರೂಪಾಯಿ, 12 ಕ್ಕೆ 2—13—0 25 ಕ್ಕೆ 5—3—0.

ಧನಗುಪ್ತ

ಪಾಳ್ಯದ ವೆಂಕಟಾಚಲ ಪಂಡಿತರ

ಶ್ರೀ ಸೀತಾರಾಮನ ವೈದ್ಯಶಾಲಾ, ಶ್ರೀ ಸೀತಾರಾಮನ ವೈದ್ಯಶಾಲಾ

ಚಿಕ್ಕಪೇಟೆ, ಬೆಂಗಳೂರು ಮಲ್ಲಾಪುರಂ, ಮೈಸೂರು



ಭಂಗಾರದ ಕೈಬಳೆಗಳೂ, ಜೈಸುಗಳು, ವಜ್ರೆರ ಆಭರಣಗಳೂ ಜೊಕ್ಕ ಬೆಳ್ಳಿಗಾ ಸಾಮಾನುಸುಗಳೂ ನಮ್ಮಲ್ಲಿ ಖಾತರಿಯಾ ಸಿಗುತ್ತವೆ.

ಮು ಜೂ ರಿ ಇತರ ಕಡೆಗಳಿಗಿಂ ಸು ಲ ಜ. ಕೆ ಲ ಸ ಇತರ ಕಡೆಗಳಿಗಿಂ ನಾನ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ನೋಡಿ

ಯಸ್ ನರಸಿಂಹ ಅಯ್ಯರ್ ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ,

ಕೆನರಾಯಣಪ್ಪ ನಗರ್ತಪೇಟೆ, ಬೆಂಗಳೂರು ಸಿ

TAI NADU.

Daily Edition.

The Leading Nationalist Daily of Mysore.

Printed and published by T. R. Ramaiya, at Sri Amma Press, D Subbiah Road Mysore.

TAI NADU

9—1—1929

ಸ್ವರಾಜ್ಯ ಶತ್ರುಗಳು.

ಲೇಖಕರು.—ಲಾಲಾ ಲಜಪತರಾಯರು

(ಪಂಜಾಬು ಕೇಸರಿ ಲಾಲಾ ಲಜಪತರಾಯರವರು 1915 ರಲ್ಲಿ ಅಮೇರಿಕಾದಲ್ಲಿ ಯಂಗ್ ಇಂಡಿಯಾ ಎಂಬ ಪುಸ್ತಕವೊಂದನ್ನು ಪ್ರಸಿದ್ಧ ಮಾಡಿದರು. ಅದರಲ್ಲಿನ ಮುಖ್ಯವಾದ ಅಂಶಗಳನ್ನು ಈ ಕೆಳಗೆ ಕೊಡಲ್ಪಟ್ಟಿದೆ)

ಇತ್ತೀಚಿನಲ್ಲಿ ಇಂಗ್ಲಾಂಡಿನಂತೆ ಸಮ್ಮ ದೇಶದಲ್ಲಿಯೂ ಅಂತಶ್ಕಲ್ರುಗಳಿರುವರು. ಅವರಿಗೆ ಸ್ವರಾಜ್ಯವೂ ಬೇಕಿಲ್ಲ. ಸ್ವಾತಂತ್ರ್ಯವೂ ಬೇಕಿಲ್ಲ. ಇವರು ಐಶ್ವರ್ಯವಂತರಾಗಿದ್ದರೂ ರಾಜಾಪ್ರತಿನಿಧಿಯವರೆಂಬ ಬಿರುದನ್ನು ಹೊಂದಿದ್ದರೂ ತಮ್ಮ ದಿ ಮೊದಲಿಲ್ಲದ ಸಂತೋಷಗಳನ್ನು ಪಡೆದಿದ್ದರೂ ಇವರಿಗೆ ನಾವು ಪರಕೀಯರಿಂದ ತೊಲಿಯಲ್ಪಡುತ್ತಿರುವೆವು ಎಂಬ ಅನಿಸಿಕೆಯೇ ಇರುವುದಿಲ್ಲ. ಇವರಿಗೆ ಇತರರ ತೊಂದರೆಯು ಇಲ್ಲದಿದ್ದರೆ ಸಾಕು. ಇವರ ಭೋಗವಿಲಾಸಗಳಿಗೆ ಚ್ಯುತಿಯು ಒದಗಿದ್ದರೆ ಆಯಿತು. ಸೋಸೂರಿಗಳಾಗಿ ಇತರರು ಸಂಪಾದಿಸಿದ ಹಣವನ್ನು ತಿಂದು ತೇಗಿ ದುರ್ವರ್ತನೆಯಂತೆ ಕಾಲಹರಣ ಮಾಡುತ್ತಿದ್ದರೂ ಚಿಂತೆಯಿಲ್ಲ. ಆದರ್ನೇ ಇವರು ಸ್ವರ್ಗದಂತೆ ಭಾವಿಸುವರು. ಈ ಸಾಧಾರಣವಾದ ಸ್ಥಿತಿಗತಿಗಳಲ್ಲಿ ಸ್ವಲ್ಪವೂ ಬದಲಾವಣೆಯಾಗಕೂಡದು. ಇತರರು ಯಾರಾದರೂ ಈ ಬದಲಾವಣೆಯ ಪ್ರಯತ್ನವನ್ನು ಮಾಡಿದರೆ ಇವರಿಗೆ ಸಹನೆಯಿಲ್ಲ. ತಮಗೂ ತಮ್ಮ ಪಂಥದವರಿಗೂ ಏನುವಿದತ್ತು ಸಂಭವಿಸುವುದೋ ಎಂಬ ಭೀತಿಯು ಇವರನ್ನು ಆವರಿಸಿರುವುದು. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಯುಂಟಾಗಿ ಸ್ವರಾಜ್ಯ ಪ್ರಾಪ್ತವಾದರೆ ತಾವು ಸೋಮಾರಿಗಳಾಗಿ ಈಗ ಆನುಭವಿಸುತ್ತಿರುವ ಭೋಗವಿಲಾಸಗಳಿಗೆ ಎಲ್ಲಿ ಲೋಪವು ಬರುವುದೋ ಎಂಬ ಮಹದ್ ಭೀತಿಯು ಇವರುಗಳಿಗೆ ತಗಲಿರುವುದು. ಬ್ರಿಟಿಷ್ ಸರ್ಕಾರದವರು ಇವರುಗಳ ಅಸ್ಪಿಪಾಸ್ಥಿಗಳನ್ನು ಜೋಪಾನವಾಗಿ ಕಾಪಾಡುವೆವು ಎಂಬ ಭರವಸೆಯನ್ನು ಕೊಟ್ಟಿರುವರು. ಪ್ರಜೆಗಳು ಆಜ್ಞಾನಿಗಳಾಗಿರಲಿ, ಬಡವರಾಗಿರಲಿ, ದಿನದಿನಕ್ಕೆ ಕ್ಷೀಣದೆಶೆಯನ್ನು ಹೊಂದುತ್ತಿರಲಿ, ಸ್ವೇಚ್ಛೆಯಾಗಿ ಸ್ಥಿರವಾಗಿರಲಿ ಚಿಂತೆಯಿಲ್ಲ, ನಾವು ಜನ್ಮವನ್ನಿತ್ತಿದ್ದರೆ ಸಾಕು, ಎಂಬ ದುರ್ಭಾವನೆಯು ಇವರ ಸ್ಥಿತುಂಬಿರುವುದು ಬ್ರಿಟಿಷ್ ಸರ್ಕಾರದವರು ತಮ್ಮನ್ನೆ ಯೆಸ್ಸು ಊರುವುದಕ್ಕೋಸ್ಕರ ಇಂತಹ ದೇಶದ್ರೋಹಿಗಳನ್ನೇ ತಮ್ಮ ವರನ್ನಾಗಿ ಮಾಡಿಕೊಂಡು ಸ್ವರಾಜ್ಯಕ್ಕೂ, ಸ್ವಾತಂತ್ರ್ಯಕ್ಕೂ ಅವರನ್ನು ವಿರೋಧವಾಗಿ ಎತ್ತಿ ಕಟ್ಟುವರು.

ಇಂಥಹ ದೇಶದ್ರೋಹಿಗಳ ಪೈಕಿ ಕೆಲವು ರಾಜರುಗಳು, ಮಹಾರಾಜರುಗಳು, ಜಮೀನು ದಾರರುಗಳು, ಇನ್ನಾಂದಾರರುಗಳು, ಪತ್ರಿಕಾ ಸಂಪಾದಕರುಗಳು ಮತ್ತು ಸಮಾಜದಲ್ಲಿ ಅಗ್ರಗಣ್ಯರಾಗಿರುವರು. ಬ್ರಿಟಿಷರ ಶಸ್ತ್ರಾಸ್ತ್ರಗಳು ಇವರುಗಳ ಸಂರಕ್ಷಣೆಯನ್ನು ಮಾಡದೇ ಹೋದರೆ ಈವತ್ತಿನ ಪರಿಸ್ಥಿತಿಯಲ್ಲಿ ಇವರು ಬೀದಿಯಲ್ಲಿ ಒದ್ದಾಡಿರಂತೆ ಕಲ್ಲುಗಳನ್ನು ಒಟ್ಟಿಕೊಳ್ಳಿಯ ಬೇಕಾಗುವುದು. ಮಕ್ಕರಿಗಳಲ್ಲಿ ಮಣ್ಣನ್ನು ಹೊಸಬೇಕಾಗುವುದು. ಗಡಿಗೆಗಳಲ್ಲಿ ನೀರನ್ನು ತಂಬೇಕಾಗುವುದು. ಬ್ರಿಟಿಷರು ಇವರುಗಳ ಸಂರಕ್ಷಣೆಯನ್ನು ಮಾಡುವ ವಾಗ್ದಾನವನ್ನು ಮಾಡಿರುವುದರಿಂದಲೇ ಈ ಮದಾಂಧರು ನಿರ್ಲಜ್ಜರಾಗಿರುವರು. ಪತಿವ್ರತೆಯರಾದ ಅನೇಕ ಸ್ತ್ರೀಯರನ್ನು ತಮ್ಮ ರಾಣೀವಾಸಕ್ಕೆ ಸೇರಿಸಿಕೊಂಡು ತೀಚಕರಂತೆ ವರ್ತಿಸುತ್ತಿರುವರು. ಅನೇಕ ರಾಜರುಗಳಿಗೆ ನಾಚಿಕೆ, ಹೇಸಿಕೆ ಎಂಬುವುದೇ ಇಲ್ಲ. ಇವರ ಉಗ್ರಾಣಗಳಲ್ಲಿ ಬ್ರಾಂದಿ, ವಿಸ್ಕಿ, ಸಾರಾಯಿ, ವೈಸುಗಳ ಸೀಸೆಗಳೂ ಬುಡ್ಡಿಗಳೂ, ಪಿಸ್ತೂಲುಗಳೂ ತುಂಬಿರುವುವು, ಇವರ ಅರಮನೆಗಳಲ್ಲಿ ಜೂಜಿನ ಕುದುರೆಗಳೂ ಜೂಲು ನಾಯಿಗಳೂ ಮಯವಾಗಿರುವುವು. ಇವರ ವಿಹಾರ ಗೃಹಗಳಲ್ಲಿ ಚಿನ್ನ ಬೆಳ್ಳಿ, ರೇಷ್ಮೆ ಮಕವಲ್ಲುಗಳಿಗೆ ಕೊರತೆ ಮೊದಲೇ ಇಲ್ಲ. ಈ ರಾಜರುಗಳು ಪ್ರತಿದಿನದಲ್ಲಿಯೂ ತಿನ್ನುವ ಆಹಾರಗಳು ಪಾಶ್ಚಾತ್ಯರ ಪಾಕಶಾಲೆಗಳಿಂದಲೇ ಸಿದ್ಧವಾಗಿಬರುವುವು. ಇವರು ಪ್ರಯಾಣಕ್ಕೆ ಹೊಂಟರೆ ಇವರ ಸರಿವಾಕ್ಕು ಕೊನೆಮೊದಲೇ ಇಲ್ಲ. ಸ್ಪೆಷಲ್ ರೈಲುಗಳಿಗೂ ಸೆಲೂನುಗಳಿಗೂ ಇವರು ಸುತ್ತಿಯುವ ದೊಡ್ಡ ನದಿಯ ಪ್ರವಾಹದಂತೆ ಧಾರೆಯಾಗಿ ಹೋಗುವುದು. ದಿನ ಬೆಳಗಾದರೆ ಇವರ ಭೋಗವಿಲಾಸವು ಹೊಸಹೊಸ ರೂಪವನ್ನು ತಾಳುವುದು. ಈ ವಸ್ತು ಅನುಭವಿಸಿಗ ಪದಾರ್ಥವು ನಾಳೆಗೆ ಕೂಡದು, ದಿನದಿನಕ್ಕೆ ಹೊಸಹೊಸ ಅಪ್ಸರ ಸ್ತ್ರೀಯರುಗಳು ಬೇಕು. ಇವರು ದಿನದಿನಕ್ಕೂ ಹೊಸಹೊಸ ಮದ್ಯವನ್ನು ಅಪೇಕ್ಷಿಸುವರು. ಈ ವಿಲಾಸವೆಲ್ಲಾ ಬ್ರಿಟಿಷರ ಆಳ್ವಿಕೆ ಇದ್ದರೇನೇನಡೆಯುವುದು. ಇದೇ ಅವರಿಗೆ ಸ್ವರ್ಗ. ಈ ರಾಜರುಗಳಿಗೆ ಮಾನಸೆಂಬುದೇನೋ ಗೊತ್ತಿಲ್ಲ. ರಾಜಕೀಯ ಬದಲಾವಣೆಗಳು ಉಂಟಾದರೆ ತಮಗೆ ಪರಮ ಪ್ರಿಯವಾಗಿರುವ ವಸ್ತುಗಳೆಲ್ಲಾ ಎಲ್ಲಿ ಹೋಗುವುವೊ ಎಂಬ ಹೆದರಿಕೆಯು ಇವರುಗಳಿಗೆ ಬಲವಾಗಿರುವುದು. ಇಂತಹ ಪರಿಗೆ ಸ್ವರಾಜ್ಯವೆಂದರೆ ಮರಣ. ಇವರಿಗೆ ಸ್ವರಾಜ್ಯವೂ ಬೇಡ. ಸ್ವಾತಂತ್ರ್ಯವೂ ಬೇಡ. ಇವರಿಗೆ ದೇಶಾಭಿಮಾನವೆಂಬುದು ದೊಡ್ಡ ವ್ಯಾಧಿಯಂತೆ ಕಾಣುವುದು. ಯಾವುದು ಎಳ್ಳಷ್ಟಾದರೂ ಹೋಗಲೀ ತಮ್ಮ ಸುಖಕ್ಕೆ ಲೋಪ ಬಂದಿದ್ದರೇ ಅಷ್ಟೆಸಾಕು ಎಂಬುದೇ ಇವರ ನಿತ್ಯ ದಿನದ ಪ್ರಾರ್ಥನೆ.

ಆದರೆ ಎಲ್ಲಾ ನವಾಬರೂ, ಮಹಾರಾಜರುಗಳೂ ಹೀಗೆಯೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. (ನಾಭಾ ಮಹಾರಾಜರೇ ಉದಾಹರಣೆ.) ಆದರೆ ಆತ್ಮಾಭಿಮಾನವುಳ್ಳ, ದೇಶಾಭಿಮಾನವುಳ್ಳ ನವಾಬರುಗಳೂ ಮಹಾರಾಜರುಗಳೂ ಒಬ್ಬಳ ಕಡಿಮೆ. ದೊಡ್ಡ ಸಮುದ್ರದಲ್ಲಿ ಎಲ್ಲೋ ಒಂದು ಪನಿಯಂತೆ ಅಲ್ಲಲ್ಲಿ ಕಾಣುವರು. ಬ್ರಿಟಿಷ್ ಆಳರಸರು ಇಂತಹ ಆತ್ಮಾಭಿಮಾನವಿಲ್ಲದ ದೇಶದ್ರೋಹಿಗಳಾದ ನವಾಬರುಗಳನ್ನೂ ಮಹಾರಾಜರುಗಳನ್ನೂ ತಮ್ಮ ಕಡೆಗೆ ಎಳೆದುಕೊಂಡು ತಮ್ಮ ಕಾರ್ಯವನ್ನು ಸಾಧಿಸುವರು.

